# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 126 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 16.11.2024 • ಶನಿವಾರ • ಪುಟ:04 • ಬೆಲೆ:2
Volume:02 • Issue: 126 • PRGI No:KARKAN/2023/88055 • VIJAYANAGARA • 16.11.2024 • Saturday • Page:04 • Rs:2




HAMPI TIMES
No.1 Leading Local News Paper
1,00,000
E-PAPER READERS
NEWS PAPER ADVT - THE BEST ADVERTISING PLATFORM TO BOOST YOUR BUSINESS
for More Information Call us 94486 33038


ಮೈಕ್ರೋ ನ್ಯೂಸ್

## ಬಳ್ಳಾರಿ ಡಿಸಿಸಿ ಬ್ಯಾಂಕ್‌ನ ಅಧ್ಯಕ್ಷ ಕೆ.ತಿಪ್ಪೇಸ್ವಾಮಿ ಸಹಕಾರ ರತ್ನ ಪ್ರಶಸ್ತಿಗೆ ಆಯ್ಕೆ

**ಹಂಪಿ ಟೈಮ್ಸ್ ಹೊಸಪೇಟೆ**



ಬಳ್ಳಾರಿ ಡಿಸಿಸಿ ಬ್ಯಾಂಕ್‌ನ ಅಧ್ಯಕ್ಷ ಕೆ.ತಿಪ್ಪೇಸ್ವಾಮಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ ನೀಡುವ ಸಹಕಾರ ರತ್ನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ಎಂದು ಮಹಾ ಮಂಡಳದ ವ್ಯವಸ್ಥಾ ಪಕ ನಿರ್ದೇಶಕರು ತಿಳಿಸಿದ್ದಾರೆ. ನ.17 ರಂದು ಬೆಳಿಗ್ಗೆ 10ಕ್ಕೆ ಬಾಗಲಕೋಟೆಯ ತೋಟಗಾರಿಕಾ ವಿವಿ ಪಕ್ಕದ ಮೈದಾನದಲ್ಲಿ ನಡೆಯುವ 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರಂಭದಲ್ಲಿ ಸಹಕಾರ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಿದೆ. ಪ್ರಶಸ್ತಿಗೆ ಭಾಜನರಾದ ಕೆ.ತಿಪ್ಪೇಸ್ವಾಮಿ ಅವರು ಪತ್ರಿಕೆಯೊಂದಿಗೆ ಮಾತನಾಡಿ, ಸಹಕಾರಿ ಕ್ಷೇತ್ರದಲ್ಲಿ ಮಾಡಿದ ಸೇವೆಯನ್ನು ಗುರುತಿಸಿ ನೀಡುತ್ತಿರುವ ಪ್ರಶಸ್ತಿಯು ನನ್ನಲ್ಲಿ ಮತ್ತಷ್ಟು ಜವಾಬ್ದಾರಿ ಹೆಚ್ಚಿಸಿದೆ. ಪ್ರಶಸ್ತಿಗಳು ಮತ್ತಷ್ಟು ಜನಮುಖಿಯಾಗಿ ಕೆಲಸ ಮಾಡಲು ಪ್ರೇರಣೆ ನೀಡುತ್ತವೆ. ಪ್ರಶಸ್ತಿಗೆ ಆಯ್ಕೆಗೆ ಸಹಕಾರ ನೀಡಿದ ಸಹಕಾರಿ ಸಚಿವರು, ಶಾಸಕರುಗಳು ಹಾಗೂ ಡಿಸಿಸಿ ಬ್ಯಾಂಕಿನ ನಿರ್ದೇಶಕರುಗಳಿಗೆ ಹಾಗೂ ಸಿಬ್ಬಂದಿಗಳ ಸಹಕಾರಕ್ಕೆ ಅನಂತ ಕೃತಜ್ಞೆತೆಗಳು ಎಂದು ತಿಳಿಸಿದರು.

# ಹೊರ ಗುತ್ತಿಗೆ ನೇಮಕದಲ್ಲಿ ಸ್ಥಳೀಯರಿಗೆ ಅವಕಾಶ ನೀಡಿ

### ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ಅಧಿಕಾರಿಗಳಿಗೆ ಸೂಚನೆ | ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ

### ವಾರದಲ್ಲಿ 6 ದಿನ ಮೊಟ್ಟೆ | ಮೊಟ್ಟೆ ಧರ ಏರಿಕೆಯಿಂದ ಸರಿದೂಗಿಸುವುದು ಸಮಸ್ಯೆಯಾಗಿದೆ ಎಂದ ಬಿಇಒ




**ಹಂಪಿ ಟೈಮ್ಸ್ ಕೂಡ್ಲಿಗಿ**

ವಿವಿಧ ಇಲಾಖೆಯಲ್ಲಿ ಹೊರಗುತ್ತಿಗೆ ನೇಮಕ ಮಾಡಿಕೊಳ್ಳುವಾಗ ಸ್ಥಳೀಯರಿಗೆ ಹಾಗೂ ಅರ್ಹರಿಗೆ ಮಾತ್ರ ಅವಕಾಶ ನೀಡಬೇಕು. ನೇಮಕಕ್ಕೂ ಮೊದಲು ನಮ್ಮ ಗಮನಕ್ಕೆ ತರಬೇಕು ಎಂದು ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ನಡೆದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಕ್ಷೇತ್ರದಲ್ಲಿ 30ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಪರಿಹಾರ ಕೊಡಿಸುವ ಪ್ರಯತ್ನ ಮಾಡಲಾಗಿದೆ. ಇವುಗಳಲ್ಲಿ 22ಕ್ಕೆ ಅನುಮೋದನೆ ಸಿಕ್ಕಿದ್ದು, 8 ಜನರಿಗೆ ಈಗಾಗಲೇ ಚೆಕ್ ಸಿದ್ದವಾಗಿವೆ. ಇಂತಹ ಪ್ರಕರಣಗಳು ಬಂದಾಗ ಯಾವುದೇ ಕಾರಣ ಹೇಳದೆ ಶೀಘ್ರ ಪರಿಹಾರ ಕೊಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಶಾಲೆಗಳಲ್ಲಿ ಶಿಸ್ತು ಬಹಳ ಮುಖ್ಯವಾಗಿದೆ, ಅಲ್ಲಿ ದುಶ್ಚಟಗಳಿಗೆ ಅವಕಾಶವಿರಬಾರದು. ಅಂತಹ ಪ್ರಕರಣಗಳು ಕಂಡು ಬಂದಲ್ಲಿ ತಕ್ಷಣವೇ ಶಿಸ್ತು ಕ್ರಮವಾಗಬೇಕು ಎಂದು ಬಿಇಒ ಪದ್ಮನಾಭ ಕರಣಂಗೆ ಸೂಚನೆ ನೀಡಿದರು.

ಬಿಇಒ ಪದ್ಮನಾಭ ಕರಣಂ ಹಾಗೂ ಬಿಸಿಯೂಟ ಯೋಜನೆಯ ಸಹಾಯ ನಿರ್ದೇಶಕ ಕೆ.ಜಿ. ಆಂಜನೇಯ ಜಂಟಿಯಾಗಿ ಮಾತನಾಡಿ, ತಾಲೂಕಿನಲ್ಲಿ 62 ಸಾವಿರ ವಿದ್ಯಾರ್ಥಿಗಳಿದ್ದು, ಅವರಿಗೆ ವಾರದಲ್ಲಿ 6 ದಿನ ಮೊಟ್ಟೆ ನೀಡಲಾಗುತ್ತಿದೆ. ಆದರೆ ಮೊಟ್ಟೆ ಧರ ಏರಿಕೆಯಿಂದ ಅವುಗಳನ್ನು ಸರಿದೂಗಿಸುವುದು ಸಮಸ್ಯೆಯಾಗಿದೆ. ಈ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತರಲಾಗಿದೆ. ಶೇಂಗಾ ಚಿಕ್ಕಿಯನ್ನು ನೀಡುವುದನ್ನು ಸಂಪೂರ್ಣ ನಿಲ್ಲಿಸಲಾಗಿದೆ ಎಂದು ಮಾಹಿತಿ ನೀಡಿದರು.

ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ವಾಮದೇವ ಕೊಳ್ಳಿ ಮಾತನಾಡಿ, ತಾಲೂಕಿನಲ್ಲಿ ಒಟ್ಟು 256 ರೈತರಿಗೆ ಸೇರಿ 164 ಹೆಕ್ಟೇರ್ ಬೆಳೆ ಹಾನಿಯಾಗಿದ್ದು, ಪರಿಹಾರಕ್ಕಾಗಿ ಶಿಫಾರಸ್ಸು ಮಾಡಲಾಗಿದೆ. ರೈತ ಸಮೃದ್ಧಿ ಯೋಜನೆ, ಬಹು ಬೆಳೆ ಕಟಾವು ಯಂತ್ರ ಹಾಗೂ ಇತರೆ ಉಪಕರಣಗಳು ಮತ್ತು ಕಬ್ಬು ಕಟಾವು ಯಂತ್ರ ಖರೀದಿಗೆ ಹೊಸ ಯೋಜನೆ ಜಾರಿ ಮಾಡಲಾಗಿದೆ. ಇದರಲ್ಲಿ ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿ ಹಾಗೂ ಸಂಘ ಸಂಸ್ಥೆಗಳಿಗೆ ಶೇ 70ರಷ್ಟು, ಮತ್ತು ಸಾಮಾನ್ಯ ರೈತರಿಗೆ ಶೇ 50ರಷ್ಟು ರಿಯಾಯಿತಿ ಸಿಗಲಿದ್ದು, ಉಳಿದ ಹಣವನ್ನು ಬ್ಯಾಂಕ್ ಮೂಲಕ ಸಾಲ ನೀಡಲಾಗುವುದು ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಗ್ರಾಮೀಣ ಕುಡಿಯುವ ನೀರು, ಜೆಸ್ಕಾಂ, ತೋಟಗಾರಿಕೆ, ಸಣ್ಣ ನೀರಾವರಿ ಸೇರಿದಂತೆ ವಿವಿಧ ಇಲಾಖೆಗಳ ಪರಿಶೀಲನೆ ನಡೆಸಲಾಯಿತು.

ಇದಕ್ಕೂ ಮೊದಲು ಆತ್ಮಹತ್ಯೆ ಮಾಡಿಕೊಂಡು ರೈತರೊಬ್ಬರ ಕುಟುಂಬಕ್ಕೆ 5 ಲಕ್ಷ ಹಾಗೂ ಹಾವು ಕಚ್ಚಿ ಮೃತಪಟ್ಟ 3 ಜನ ರೈತರ ಕುಟುಂಬಗಳಿಗೆ ತಲಾ 2 ಲಕ್ಷ ರೂಪಾಯಿ ಪರಿಹಾರ ಮಂಜೂರಾತಿ ಪತ್ರವನ್ನು ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ವಿತರಿಸಿದರು.

ಕೂಡ್ಲಿಗಿ ತಹಸೀಲ್ದಾರ್ ಎಂ. ರೇಣುಕಾ, ಕೊಟ್ಟೂರು ತಹಸೀಲ್ದಾರ್ ಜಿ.ಕೆ. ಅಮರೇಶ್, ಕೂಡ್ಲಿಗಿ ತಾಪಂ ಇಒ ನರಸಪ್ಪ, ಕೊಟ್ಟೂರಿನ ಆನಂದ್ ಕುಮಾರ್, ತಾಲೂಕು ಮಟ್ಟದ ಅಧಿಕಾರಿಗಳು, ಪಿಡಿಒಗಳು ಭಾಗಿಯಾಗಿದ್ದರು.

# ಪಾಲಕರು ಮಕ್ಕಳ ಶಿಕ್ಷಣ ನಿರ್ಲಕ್ಷ್ಯಿಸಿದರೆ ಬದುಕು ಭಾರ

### ನಿವೃತ್ತ ಡಿವೈಎಸ್‌ಪಿ ಸುಧಾಕರ ರೆಡ್ಡಿ ಹೇಳಿಕೆ



**ಹಂಪಿ ಟೈಮ್ಸ್ ಹೊಸಪೇಟೆ**

ಸರ್ಕಾರಿ ಶಾಲೆಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ಅರ್ಹ ಶಿಕ್ಷಕರಿದ್ದಾರೆ. ವಿದ್ಯಾರ್ಥಿಗಳು ಮತ್ತು ಪಾಲಕ ಪೋಷಕರ ಸಹಕಾರ ಅಗತ್ಯವಿದೆ ಎಂದು ಶಿಕ್ಷಣ ಪ್ರೇಮಿ ನಿವೃತ್ತ ಡಿವೈಎಸ್‌ಪಿ ಸುಧಾಕರ ರೆಡ್ಡಿ ಹೇಳಿದರು.

ತಾಲೂಕಿನ ನಾಗೇನಹಳ್ಳಿ ಸರ್ಕಾರಿ ಹಿ.ಪ್ರಾ.ಶಾಲೆಯಲ್ಲಿ ಗುರುವಾರ ಪಂಡಿತ್ ಜವಾಹರಲಾಲ್ ನೆಹರೂ ಜಜೀ ಅವರ ಜನ್ಮದಿನದಂಗವಾಗಿ ಹಮ್ಮಿಕೊಂಡಿದ್ದ ಮಕ್ಕಳ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಮಕ್ಕಳ ಕಲಿಕೆಯ ಬಗ್ಗೆ ತಂದೆ ತಾಯಿಗಳು ನಿಗಾವಹಿಸಿಸಬೇಕು. ಮಕ್ಕಳ ಶಿಕ್ಷಣದ ವಿಷಯದಲ್ಲಿ ಪೋಷಕರು ನಿರ್ಲಕ್ಷ್ಯವಹಿಸಿದರೆ ಮಕ್ಕಳು ಭವಿಷ್ಯದ ಬದುಕಿನುದ್ದಕ್ಕೂ ಕಷ್ಟದ ದಿನಗಳನ್ನು ಎದುರಿಸಬೇಕಾಗಬಹದು ಎಂಬುದನ್ನು ಈಗಲೇ ಅರಿತುಕೊಂಡು ಜಾಗೃತೆವಹಿಸಿದರೆ ಮಕ್ಕಳ ಭವಿಷ್ಯ ಉಜ್ವಲವಾಗಲಿದೆ. ಪ್ರತಿ ವರ್ಷ ಶಾಲೆಯಲ್ಲಿ ಉತ್ತಮ ಅಂಕ ಗಳಿಸುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಪೂರಕ ಬಹುಮಾನ ನೀಡಲಾಗುವುದು ಎಂದರು.

ಮಕ್ಕಳ ದಿನಾಚರಣೆ ನಿಮಿತ್ತ ವಿದ್ಯಾರ್ಥಿಗಳಿಗೆ ಆಟೋಟ ಸ್ಪರ್ಧೆ ಸೇರಿದಂತೆ ವಿವಿಧ ಸ್ಪರ್ಧೆಗಳನ್ನು ಶಿಕ್ಷಕರು ಆಯೋಜಿಸಿದ್ದು. ಆಯ್ಕೆಯಾದ ಪ್ರತಿಭಾವಂತ ಮಕ್ಕಳಿಗೆ ಈ ಸಂದರ್ಭದಲ್ಲಿ ಬಹುಮಾನ ವಿತರಿಸಿದರು.

ಎಸ್‌ಡಿಎಂಸಿ ಅಧ್ಯಕ್ಷ ರವಿಶಂಕರ್ ದೇವರಮನೆ ಅಧ್ಯಕ್ಷತೆವಹಿಸಿದ್ದರು. ಶಾಲಾ ಮುಖ್ಯಗುರು ಸರೋಜಮ್ಮ, ನಾಗೇನಹಳ್ಳಿ ಗ್ರಾಪಂ ಅಧ್ಯಕ್ಷ ದುರುಗಪ್ಪ, ಸೇರಿದಂತೆ ಎಸ್‌ಡಿಎಂಸಿ ಸದಸ್ಯರು, ಶಿಕ್ಷಕರು ಇದ್ದರು. ಶಿಕ್ಷಕರಾದ ಅನಿತಾ, ಸಬೀನಾ, ಆಯಿಷಾ ನಿರ್ವಹಿಸಿದರು.


ಹೃತ್ಪೂರ್ವಕ ಅಭಿನಂದನೆಗಳು

ಸಹಕಾರಿ ರತ್ನ ಪ್ರಶಸ್ತಿಗೆ ಆಯ್ಕೆ

ಸಹಕಾರಿ ರತ್ನ ಪ್ರಶಸ್ತಿಗೆ ಭಾಜನರಾದ ಬಳ್ಳಾರಿ ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಕೆ.ತಿಪ್ಪೇಸ್ವಾಮಿ ಅವರಿಗೆ ಹೃದಯಪೂರ್ವಕ ಅಭಿನಂದನೆಗಳು





ಶ್ರೀ ಕೆ.ತಿಪ್ಪೇಸ್ವಾಮಿ
ಅಧ್ಯಕ್ಷರು, ಬಳ್ಳಾರಿ ಡಿ.ಸಿ.ಸಿ. ಬ್ಯಾಂಕ್, ಹೊಸಪೇಟೆ

ನಿಮ್ಮ ಉತ್ಸಾಹ, ಪರಿಶ್ರಮ ಮತ್ತು ಸಹಕಾರ ಕ್ಷೇತ್ರದಲ್ಲಿ ಸಲ್ಲಿಸಿದ ಅತ್ಯುತ್ತಮ ಸೇವೆಯನ್ನು ಗುರುತಿಸಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತವು ಈ ಪ್ರಶಸ್ತಿಯು ನಿಮಗೆ ಪ್ರದಾನ ಮಾಡುತ್ತಿರುವುದು ತುಂಬಾ ಗೌರವ, ಹಾಗೂ ಹರ್ಷದ ವಿಷಯ. ನಿಮ್ಮ ಯಶಸ್ಸು ನಮ್ಮೆಲ್ಲರಿಗೂ ಪ್ರೇರಣೆಯಾಗಿದೆ ಮತ್ತು ನಿಮ್ಮ ಪ್ರಯತ್ನಗಳು ಸಮಾಜದ ಅಭಿವೃದ್ಧಿಗೆ ಹೊಸ ದಿಕ್ಕು ನೀಡುತ್ತಿವೆ. ನಿಮ್ಮ ಮುಂದಿನ ಹಾದಿ ಯಶಸ್ಸು ಮತ್ತು ಸಾಧನೆಗಳಿಂದ ತುಂಬಿರಲಿ

ಶುಭಕೋರುವವರು:
ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ ಹಾಗೂ ಪದಾಧಿಕಾರಿಗಳು, ಸದಸ್ಯರು
ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜ, ಹೊಸಪೇಟೆ ತಾಲೂಕು ಘಟಕ, ವಿಜಯನಗರ ಜಿಲ್ಲೆ

## ಸ್ಟುಡೆಂಟ್ ಕಾಲಂ

# ರೈತ ದೇಶಕ್ಕೆ ಅನ್ನದಾತ



ಒಂದು ಹಳ್ಳಿಯಲ್ಲಿ ರಾಮಪ್ಪ ಹೆಂಡತಿ ಸೀತಾಮ್ಮ ವಾಸಿಸುತ್ತಿದ್ದರು. ಅವರು ಬಹಳ ಶ್ರೀಮಂತರಾಗಿದ್ದರು. ಕೆಲವು ವರ್ಷಗಳ ನಂತರ ಅವರಿಗೆ ಒಂದು ಮಗು ಹುಟ್ಟಿತ್ತು. ಅವನ ಹೆಸರು ರವಿ. ಅವನನ್ನು ಬಹಳ ಪ್ರೀತಿಯಿಂದ ನೋಡಿ ಕೊಳ್ಳುತ್ತಿದ್ದರು. ಕೆಲವು ವರ್ಷ ಕಳೆಯಿತು. ಅವನನ್ನು ಇಂಗ್ಲಿಷ್ ಶಾಲೆಗೆ ಸೇರಿಸಿದರು. ಆದರೆ ಅವನಿಗೆ ಓದಿನಲ್ಲಿ ಆಸಕ್ತಿ ಇರಲಿಲ್ಲ. ಅವನಿಗೆ ಹೊಲದಲ್ಲಿ ಕೆಲಸ ಮಾಡುವುದು ಎಂದರೆ ಬಹಳ ಇಷ್ಟ. ಈ ವಿಷಯವನ್ನು ಅಪ್ಪ–ಅಮ್ಮನ ಮುಂದೆ ಹೇಳಿದ. 'ನಮ್ಮ ಹೊಲದಲ್ಲಿ ಕೆಲಸ ಮಾಡುವವರು ಬಹಳ ಜನ ಇದ್ದಾರೆ ನೀನು ಶಾಲೆಗೆ ಹೋಗು' ಎಂದು ತಂದೆ ರಾಮಪ್ಪನು ಸಿಟ್ಟಿನಿಂದ ಹೇಳಿದ. ಆದರು ಅವನು ಅಪ್ಪ ಹೇಳಿದ ಮಾತು ಕೇಳಲಿಲ್ಲ. ಅಮ್ಮನಿಗೆ ಮಗ ಎಂದರೆ ಬಹಳ ಪ್ರೀತಿ. ಅದಕ್ಕೆ ಅವರು 'ನಿನಗೆ ಏನೂ ಇಷ್ಟವೋ ಆ ಕೆಲಸ ಮಾಡು' ಎಂದಳು. ಸರಿ ಅಮ್ಮಾ ನಾನು ಹೊಲದಲ್ಲಿ ಕೆಲಸ ಮಾಡಿ ಒಳ್ಳೆಯ ಬೆಳೆ ಬೆಳೆದು ಜನರಿಗೆ ಒಳ್ಳೆಯದನ್ನು ಮಾಡುತ್ತೇನೆ ಎಂದನು.



ಕೆಲವು ದಿನ ಹೀಗೆ ಕಳೆದವು. ಮಗ ಬಿಸಿಲಿನಲ್ಲಿ ಬೇಸಾಯವನ್ನು ಮಾಡುವುದನ್ನು ನೋಡಿ ರಾಮಪ್ಪನು 'ರವಿ ನಾನು ಹೇಳಿದ ಹಾಗೆ ನೀನೂ ಶಾಲೆಗೆ ಹೋಗಿದ್ದರೆ, ಓದಿ ಒಳ್ಳೆಯ ಕೆಲಸದಲ್ಲಿ ಇರುತ್ತಿದ್ದೆ. ನೆರಳಲ್ಲಿ ಕೆಲಸ ಮಾಡುತ್ತಿದ್ದೆ' ಎಂದು ರಾಮಪ್ಪನು ಹೇಳಿದ. ಆಗ ರವಿಯು ಅದಕ್ಕೆ 'ಅಪ್ಪಾಜ್ಜಿ ಎಲ್ಲಾ ತಂದೆ ತಾಯಿಯು ತಮ್ಮ ಮಕ್ಕಳು ಪೊಲೀಸ್, ಡಾಕ್ಟರ್, ಇಂಜಿನಿಯರ್ ಆಗಬೇಕೆಂದು ಬಯಸುತ್ತಾರೆ. ಆದರೆ ಅವರಿಗೆ ಅನ್ನ ಹಾಕುವುದು ರೈತ ಎನ್ನುವುದನ್ನು ಮಾತ್ರ ಯಾರು ಯೋಚನೆ ಮಾಡುವುದೇ ಇಲ್ಲ' ಎಂದನು ರವಿ. ಅದಕ್ಕೆ ರಾಮಪ್ಪನ ಹೆಂಡತಿ ಸೀತಮ್ಮನು 'ಹೌದು ಮಗ ನೀನು ಚಿಕ್ಕವನಾದರು ಸಹ ನಾನು ಹೇಳುವ ಮಾತು ನೀನು ಹೇಳಿದೆ' ಎಂದಳು. ಆಗ ರಾಮಪ್ಪನು 'ನಾನು ಕೂಡಾ ಇನ್ನೂ ಮುಂದೆ ಹೊಲದಲ್ಲಿ ಕೆಲಸ ಮಾಡುತ್ತೇನೆ' ಎಂದನು. ಮೂವರು ಹೊಲದಲ್ಲಿ ಕೆಲಸ ಮಾಡಿ ಸಂತೋಷದಿಂದ ಬಾಳಿದರು. "ರೈತ ದೇಶದ ಬೆನ್ನೆಲುಬು" ಅಲ್ಲವೇ?

**– ಬಿ. ದೀಪಾ. 10ನೇ ತರಗತಿ.**
**ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹ.ಬೊ.ಹಳ್ಳಿ(ತಾ)**

## ಪ್ರೀತಿಯ ವಿದ್ಯಾರ್ಥಿಗಳೇ ನೀವೂ ಬರೆಯಿರಿ

ಪ್ರೀತಿಯ ವಿದ್ಯಾರ್ಥಿಗಳೇ ನಿಮಗಾಗಿ ನಿಮ್ಮ ಬರವಣಿಗೆ ಕೌಶಲ ಹೆಚ್ಚಿಸಿಕೊಳ್ಳಲು **ಹಂಪಿ ಟೈಮ್ಸ್ ಸ್ಟುಡೆಂಟ್ ಕಾಲಂ ವೇದಿಕೆ** ಕಲ್ಪಿಸಿದೆ. ನೀವು ಸಣ್ಣ ಸಣ್ಣ ಕಥೆ, ಕವನಗಳನ್ನು ಬರೆಯಬಹುದು. ಇಂದೇ ಆರಂಭಿಸಿ ನೀವು ಭವಿಷ್ಯದಲ್ಲಿ ಲೇಖಕರಾಗಿ ಬೆಳೆಯಿರಿ.

ಇ–ಮೇಲ್:hampitimes@gmail.com
M: 94486 33038

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಎಲ್ಲಾ ರೋಗಕ್ಕೂ ಔಷಧ ಇದ್ದಿದ್ದರೆ......

ಕಳೆದ ನಾಲ್ಕು ವರ್ಷಗಳ ಹಿಂದೆ ಇಡೀ ಜಗತ್ತು ಕರೋನಾ ಜ್ವರದ ಬಗ್ಗೆ ಮಾತನಾಡುತ್ತಿತ್ತು. ಡಿಸೆಂಬರ್ 2019ರಲ್ಲಿ ಚೀನಾದ ಹುಬೈ, ವುಹಾನ್‌ನಲ್ಲಿ ಮೊದಲಿಗೆ ಪತ್ತೆಯಾದ ಕರೋನಾ ಇಂದು ಜಗತ್ತಿನ ಬಹುಭಾಗದಲ್ಲಿ ಹರಡಿ ತಲ್ಲಣವನ್ನುಂಟು ಮಾಡಿತ್ತು. ಎಲ್ಲಾ ದೇಶಗಳ ಕೆಲವು ಜನರು ಈ ರೋಗದಿಂದ ಸಾವನ್ನಪ್ಪಿದರು. ರೋಗ ಕಾಣಿಸಿಕೊಂಡ ಕೇವಲ ಮೂರು ತಿಂಗಳ ಅವಧಿಯಲ್ಲಿ ಪ್ರಪಂಚದಾದ್ಯಂತ ಅತೀ ಹೆಚ್ಚು ಜನರನ್ನು ಬಲಿ ಪಡೆದ ರೋಗ ಇದಾಗಿದ್ದು ಜನರಲ್ಲಿ ಆತಂಕ ಸೃಷ್ಟಿಸಿತ್ತು.

ಇಂತಹ ರೋಗಗಳು ಈ ಜಗತ್ತಿಗೆ ಹೊಸತೇನಲ್ಲ. ಈ ಹಿಂದೆಯೂ ಇಂತಹ ಮಾರಣಾಂತಿಕ ಖಾಯಿಲೆಗಳು ಒಂದು ಹೋಗಿವೆ.ಪ್ಲೇಗ್‌ನಂತಹಮಹಾರೋಗವನ್ನುನಿಯಂತ್ರಿಸಲಾಯಿತು. ಪೋಲಿಯೋದಂತಹ ಗಂಭೀರ ಖಾಯಿಲೆಗೆ ಔಷಧ ಕಂಡುಹಿಡಿಯಲಾಯಿತು. ಪ್ರತಿದಿನವೂ ಜಗತ್ತಿನ ನಾನಾ ಭಾಗಗಳ ಜನರು ವಿವಿಧ ಖಾಯಿಲೆಗಳಿಗೆ ತುತ್ತಾಗುತ್ತಲೇ ಇದ್ದಾರೆ. ಜಗತ್ತಿನಲ್ಲಿ ಕಾಣಿಸಿಕೊಳ್ಳುವ ಎಲ್ಲಾ ರೋಗಗಳಿಗೂ ಔಷಧ ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಎಂಬುದು ಎಲ್ಲರ ಆಶಯ. ಆದರೆ ಎಲ್ಲಾ ರೋಗಗಳಿಗೂ ಇದುವರೆಗೂ ಔಷಧ ಕಂಡುಹಿಡಿಯಲಾಗಿಲ್ಲ ಅಲ್ಲವೇ? ಒಂದು ವೇಳೆ ಎಲ್ಲಾ ರೋಗಗಳಿಗೂ ಔಷಧ ಇದ್ದಿದ್ದರೆ ಏನಾಗ್ತಿತ್ತು! ಎಂಬುದೇ ಈ ಬರಹದ ಕಿರು ಸಾರಾಂಶ.


ಎಲ್ಲಾ ರೋಗಕ್ಕೂ ಔಷಧ ಇದ್ದಿದ್ದರೆ ಏನಾಗ್ತಿತ್ತು! ಎಂದು ಕಲ್ಪಿಸಿಕೊಳ್ಳುವುದು ಸುಲಭ. ಆದರೆ ಅದರ ಆಚರಣೆ ತುಂಬಾ ಕಠಿಣ. ಜಗತ್ತು ಈ ಹಿಂದೆಯೂ ಕೆಲ ಗಂಭೀರ ರೋಗಗಳನ್ನು ಎದುರಿಸಿದೆ. ಕೆಲವು ರೋಗಗಳಿಗೆ ಇಂದಿಗೂ ಔಷಧ ಕಂಡುಹಿಡಿಯಲಾಗಿಲ್ಲ. ಆದರೆ ಅಂತಹ ಖಾಯಿಲೆಗಳು ಹರಡದಂತೆ ನಿಯಂತ್ರಣ ಮಾಡಲು ಹಲವಾರು ಆಯ್ಕೆಗಳಿವೆ. ಉದಾಹರಣೆಗೆ ಕಳೆದ ದಶಕದ ಹಿಂದೆ ಏಡ್ಸ್ ರೋಗ ಇಡೀ ಜಗತ್ತನ್ನು ತಲ್ಲಣಗೊಳಿಸಿತ್ತು. ಇಂದಿಗೂ ಏಡ್ಸ್ ಖಾಯಿಲೆಗೆ ನಿರ್ದಿಷ್ಟವಾದ ಔಷಧ ಇರದಿದ್ದರೂ ಅದರ ನಿಯಂತ್ರಣ ಸಾಧ್ಯವಾಗಿದೆ.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Hampi Times E-paper
SCAN AND READ

ಎಲ್ಲಾ ಖಾಯಿಲೆಗಳಿಗೆ ಔಷಧ ಕಂಡುಹಿಡಿಯಲು ಸಾಧ್ಯವೇ? ಎಂಬ ಪ್ರಶ್ನೆಯೇ ಪ್ರಶ್ನಾತೀತ. ಏಕೆಂದರೆ ಖಾಯಿಲೆಗೆ ಔಷಧ ರೋಗಿಯ ವಯಸ್ಸು, ವಾಸಿಸುವ ಪರಿಸರ ಹಾಗೂ ಅವನ ದೈಹಿಕ ಸಾಮರ್ಥ್ಯಗಳನ್ನು ಅವಲಂಬಿಸಿದೆ. ಕೆಲವು ಖಾಯಿಲೆಗಳು ಔಷಧಕ್ಕಿಂತ ರೋಗಿಯು ಅನುಸರಿಸುವ ನಿಯಂತ್ರಣ ಕ್ರಮಗಳನ್ನು ಅವಲಂಬಿಸಿರುತ್ತದೆ. ಇಂದು ಬಹುತೇಕ ಖಾಯಿಲೆಗಳಿಗೆ ಔಷಧ ಇದ್ದಾಗ್ಯೂ ಸಾವಿರಾರು ಜನರು ಖಾಯಿಲೆಗಳಿಂದ ಸಾಯುತ್ತಲೇ ಇದ್ದಾರೆ. ಅಂದರೆ ರೋಗ ನಿಯಂತ್ರಣ ನಿಯಮಗಳ ಅನುಪಾಲನೆಯಲ್ಲಿ ಬಹುತೇಕರು ಸೋಲುತ್ತಿದ್ದಾರೆ. ಅಧಿಕ ರಕ್ತದೊತ್ತಡ, ಮಧುಮೇಹ, ಪಾರ್ಶ್ವವಾಯು, ಹೃದಯದ ಖಾಯಿಲೆ, ಕ್ಯಾನ್ಸರ್‌ನಂತಹ ರೋಗಗಳಿಗೆ ಔಷಧ ಲಭ್ಯವಿದ್ದರೂ ಸರಿಯಾದ ಚಿಕಿತ್ಸಕ ಕ್ರಮಗಳನ್ನು ಅನುಸರಿಸದೇ ಇರುವುದರಿಂದ ಸಾಕಷ್ಟು ರೋಗಿಗಳು ಸಾವನ್ನಪ್ಪುತ್ತಿದ್ದಾರೆ.



### ಏನಾಗುತ್ತೆ ಗುರು?

ಎಲ್ಲಾ ರೋಗಗಳಿಗೆ ಔಷಧ ದೊರೆತಿದ್ದರೆ ರೋಗಿಗಳಿಲ್ಲದೇ ಆಸ್ಪತ್ರೆಗಳು ಬಣಗುಡುತ್ತಿದ್ದವು. ವೈದ್ಯರು ಕೆಲಸವಿಲ್ಲದೇ ವ್ಯರ್ಥವಾಗಿ ಕಾಲಹರಣ ಮಾಡಬೇಕಾಗುತ್ತಿತ್ತು. ಕ್ರಮೇಣವಾಗಿ ಆಸ್ಪತ್ರೆಗಳೆಲ್ಲ ಮುಚ್ಚುತ್ತಿದ್ದವು. ವೈದ್ಯರು ಬೇರೆ ವೃತ್ತಿಯನ್ನು ಹುಡುಕಬೇಕಾಗುತ್ತಿತ್ತು. ಆರೋಗ್ಯಕ್ಕಾಗಿ ಹೆಚ್ಚು ಹಣ ವ್ಯಯವಾಗುತ್ತಿರಲಿಲ್ಲ. ರೋಗಗಳಿಗೆ ಔಷಧ ಇದ್ದರೆ ಮಾನವರು ಖಾಯಿಲೆಗಳಿಂದ ನರಳುತ್ತಿರಲಿಲ್ಲ ಹಾಗೂ ಸಾಯುತ್ತಿರಲಿಲ್ಲ. ಮಾನವರ ಜೀವಿತ ಅವಧಿ ಹೆಚ್ಚಾಗುತ್ತಿತ್ತು. ಇದ್ದಕ್ಕಿದ್ದಂತೆ ಎಲ್ಲಾ ಖಾಯಿಲೆಗಳು ಕಣ್ಮರೆಯಾಗಿದ್ದರೆ ಜಗತ್ತಿನ ಜನಸಂಖ್ಯೆ ಖಂಡಿತವಾಗಿ ಹೆಚ್ಚುತ್ತಿತ್ತು. ಆಗ ಎಲ್ಲೆಲ್ಲೂ ಮಾನವರೇ ತುಂಬಿರುತ್ತಿದ್ದರು. ಆಹಾರಕ್ಕಾಗಿ ಪರಸ್ಪರ ಕಚ್ಚಾಡಿಕೊಳ್ಳುತ್ತಿದ್ದರು. ಭೂಮಿಯ ಮೇಲೆ ಆಹಾರದ ಪ್ರಮಾಣ ಕಡಿಮೆಯಾಗುತ್ತಿತ್ತು. ಗಿಡ ಮರಗಳ ಸಂಖ್ಯೆ ತುಂಬಾ ಕಡಿಮೆಯಾಗಿ ಅರಣ್ಯ ಸಂಪೂರ್ಣವಾಗಿ ನಾಶವಾಗುತ್ತಿತ್ತು. ಕಾಂಕ್ರಿಟ್ ಕಾಡು ಹೆಚ್ಚಾಗಿ ಮನೆಗಳ ಸಂಖ್ಯೆ ದುಪ್ಪಟ್ಟಾಗುತ್ತಿತ್ತು. ಪರಿಸರ ಮಾಲಿನ್ಯದ ಪ್ರಮಾಣ ಹೆಚ್ಚಾಗಿ ಹವಾಮಾನ ವೈಪರೀತ್ಯಗಳು ಉಂಟಾಗುತ್ತಿದ್ದವು. ರೋಗಗಳಿಗೆ ಔಷಧ ಇದ್ದಿದ್ದರೆ ಜನರಿಗೆ ಕನಿಷ್ಠ ವಿಶ್ರಾಂತಿಯೂ ಇರುತ್ತಿರಲಿಲ್ಲ. ಆರೋಗ್ಯದ ಬಗ್ಗೆ ಯಾರೂ ಕಾಳಜಿ ವಹಿಸುತ್ತಲೇ ಇರಲಿಲ್ಲ ಅಲ್ಲವೇ?

### ಸತ್ತವರೆಲ್ಲ ಪುನಃ ಜೀವ ಪಡೆದರೆ.....

ಸಾವು ಒಂದು ರೀತಿಯಲ್ಲಿ ಎಲ್ಲರಿಗೂ ನೋವು ನೀಡುತ್ತದೆ. ಕೆಲ ಅವಘಡಗಳಿಂದ ಅದೆಷ್ಟೋ ಮಕ್ಕಳು ತಂದೆ ತಾಯಿಯರನ್ನು ಕಳೆದುಕೊಂಡು ಅನಾಥವಾಗಿದ್ದಾರೆ. ಹೀಗೆ ಸತ್ತವರೆಲ್ಲ ಪುನಃ ಜೀವ ಪಡೆದರೆ ಎಷ್ಟು ಚೆನ್ನಾಗಿರುತ್ತದೆ ಅಲ್ಲವೇ? ಹೌದು ಹೀಗೊಂದು ಪ್ರಶ್ನೆ ಸದಾ ಎಲ್ಲರನ್ನು ಕಾಡುತ್ತದೆ. ಸತ್ತವರೆಲ್ಲ ಜೀವ ಪಡೆದರೆ ಅನಾಥ ಮಕ್ಕಳೆಲ್ಲ ತಂದೆ ತಾಯಿ ಮಡಿಲು ಸೇರುತ್ತಾರೆ. ಸಾವನ್ನಪ್ಪಿಸದ ನಮ್ಮ ಪ್ರೀತಿ ಪಾತ್ರರನ್ನು ಪುನಃ ಭೇಟಿಯಾಗುವ ಅವಕಾಶ ದೊರೆಯುತ್ತದೆ. ಈ ಜಗತ್ತಿನಿಂದ ಮರೆಯಾದ ಸಮಾಜ ಸುಧಾರಕರನ್ನು, ಸ್ವಾತಂತ್ರ ಹೋರಾಟಗಾರರನ್ನು, ಮಹಾನ್ ನಾಯಕರುಗಳನ್ನು, ಅಪ್ಪಟ ಮಾನವ ಪ್ರೇಮಿಗಳನ್ನು ಪುನಃ ಭೇಟಿಯಾಗುವ ಹಾಗೂ ಅವರ ಸ್ಫೂರ್ತಿದಾಯಕ ಮಾತುಗಳನ್ನು ಕೇಳುವ ಅವಕಾಶ ಮತ್ತೊಮ್ಮೆ ದೊರೆಯುತ್ತದೆ ಅಲ್ಲವೇ?.

ಕಾಲ್ಪನಿಕವಾಗಿ ಇದು ಸರಿ ಎನಿಸದಿರದು. ಆದರೆ ವಾಸ್ತವವಾಗಿ ಇದು ಅನೇಕ ತೊಂದರೆಗಳನ್ನು ತಂದೊಡ್ಡುತ್ತದೆ. ಅದೇನೆಂದು ಒಂಚೂರು ಗಮನ ಹರಿಸೋಣ.

ಇಂದು ಮನುಕುಲದ ಇತಿಹಾಸದಲ್ಲಿ ಇರುವುದಕ್ಕಿಂತ ಹೆಚ್ಚು ಜನರು ಭೂಮಿಯ ಮೇಲೆ ಬದುಕಿದ್ದಾರೆ. ಪ್ರಸ್ತುತ ಜಾಗತಿಕ ಜನಸಂಖ್ಯೆ 7.7 ಶತಕೋಟಿ ಆಗಿದೆ. ಇದು ಈ ಗ್ರಹದಲಿ ಹಿಂದೆಂದೂ ಇರದ ಸಂಖ್ಯೆಯಾಗಿದೆ. 200000 ವರ್ಷಗಳ ಹಿಂದಿನಿಂದ ಮನುಕುಲದ ಇತಿಹಾಸ ಗಮನಿಸಿದಾಗ ಜನಸಂಖ್ಯೆ ಕೇವಲ 7% ರಷ್ಟಿತ್ತು. ಆಧುನಿಕ ಮಾನವ ವಿಕಾಸಗೊಂಡಂತೆ ಜನಸಂಖ್ಯೆ ಹೆಚ್ಚಳವಾಗುತ್ತ ಸಾಗಿತು. ಈಗ ಅದು 7.7 ಶತಕೋಟಿ ದಾಟುತ್ತಿದೆ. ಈಗಿರುವ ಜನಸಂಖ್ಯೆಗೆ ಸರಿಯಾದ ಮುಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿಲ್ಲ. ಇನ್ನು ಸತ್ತವರೆಲ್ಲ ಜೀವ ಪಡೆದರೆ ಏನಾಗುತ್ತೆ? ನೋಡೋಣ.

ನಮ್ಮ ಗ್ರಹವು 10 ಶತಕೋಟಿ ಜನರನ್ನು ಹೋರುವಷ್ಟು ಸಾಮರ್ಥ್ಯ ಹೊಂದಿದೆ ಎಂದು ಕೆಲ ವಿಜ್ಞಾನಿಗಳು ಅಂದಾಜಿಸಿದ್ದಾರೆ. ಒಂದು ಸಮೀಕ್ಷೆ ಪ್ರಕಾರ 2100ರೊಳಗೆ ನಾವು ಆ ಸಂಖ್ಯೆಯನ್ನು ತಲುಪುತ್ತೇವೆ ಎಂದು ಕೂಡಾ ಹೇಳಿದ್ದಾರೆ. ಅಂದರೆ ಭೂಮಿಯಲ್ಲಿ ನಿರ್ದಿಷ್ಟ ಸಂಖ್ಯೆಯ ಜನರಿಗೆ ಮಾತ್ರ ವಾಸಿಸಲು ಅವಕಾಶ ಇದೆ ಎಂದಂತಾಯಿತು. ಈಗಿರುವ ಜನರಿಗೆ ಕೆಲ ಸಂದರ್ಭಗಳಲ್ಲಿ ಒಂದಕ್ಕಿಂತ ಹೆಚ್ಚು ಕಪ್ ಕಾಫಿ ದೊರೆಯಲಾರದು. ಇನ್ನು ಸತ್ತವರೆಲ್ಲ ಎದ್ದು ಬಂದರೆ ಗತಿಯೇನು?

ಸತ್ತವರೆಲ್ಲ ಜೀವ ಪಡೆದು ಬಂದರೆ ಉಂಟಾಗುವ ಮೊದಲ ಸಮಸ್ಯೆ ಎಂದರೆ ಆಹಾರದ ಸಮಸ್ಯೆ. ಮಾನವ ಇತಿಹಾಸ ಗಮನಿಸಿದರೆ ಬಹುತೇಕ ಮಾನವರು ಗ್ರಾಮೀಣ ಪ್ರದೇಶದಲ್ಲಿಯೇ ವಾಸಿಸಿರುವುದು ಕಂಡು ಬರುತ್ತದೆ. ಪ್ರಾಯಶಃ ಮಾನವರೆಲ್ಲ ಪುನರುತ್ಥಾನಗೊಂಡರೆ ಅವರೆಲ್ಲ ಗ್ರಾಮೀಣ ಪ್ರದೇಶಕ್ಕೆ ಮರಳುತ್ತಾರೆ. ಹಾಗೆ ಬಂದವರಿಗೆಲ್ಲ ಸಾಕಾಗುವಷ್ಟು ಸ್ಥಳ ದೊರೆಯಬಹುದಾದರೂ ಆಹಾರಕ್ಕಾಗಿ ಸಾಕಷ್ಟು ಭೂಮಿ ಇಲ್ಲದಿರುವುದು ಸಮಸ್ಯೆಯಾಗುತ್ತದೆ. ವಿಶ್ವದ ಕೃಷಿಯೋಗ್ಯ ಭೂಮಿಯಲ್ಲಿ 7%ರಷ್ಟು ಮಾತ್ರ ಆಹಾರ ಬೆಳೆಯುತ್ತೇವೆ. ಈಗಿನ ನೂರು ಶತಕೋಟಿ ದಾಟಿದ ಜನಸಂಖ್ಯೆಗೆ ಆಹಾರ ಒದಗಿಸುವುದು ಕಷ್ಟವೇ ಆಗಿರುವಾಗ ಸತ್ತವರೆಲ್ಲ ಬದಕಿದರೆ ಅವರಿಗೆ ಹಾರ ಎಲ್ಲಿಂದ ತರುವುದು ಎಂಬುದೇ ಸಮಸ್ಯೆಯಾಗುತ್ತದೆ.

ಇನ್ನೊಂದು ಪ್ರಮುಖ ಸಮಸ್ಯೆ ಎಂದರೆ ವಸತಿ. ಈಗಿನ ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ವಸತಿ ವ್ಯವಸ್ಥೆ ಕಲ್ಪಸಲು ಸರ್ಕಾರಗಳು ಹೆಣಗಾಡುತ್ತಿವೆ. ಇನ್ನು ಸತ್ತರಿಗೆ ಎಲ್ಲಿ ಒದಗಿಸುವುದು ಎಂಬ ಸಮಸ್ಯೆ ತಲೆದೋರುತ್ತದೆ. ಒಂದು ವೇಳೆ ಎಲ್ಲರಿಗೂ ವಸತಿ ಒದಗಿಸುವ ಯೋಜನೆಯನ್ನು ಸರ್ಕಾರ ಜಾರಿಗೆ ತಂದದ್ದೇ ಆದರೆ, ಕೃಷಿ ಜಮೀನಿನಲ್ಲಿಯೇ ವಸತಿ ಕಲ್ಪಿಸಬೇಕಾಗುತ್ತದೆ. ಇದರಿಂದ ಮತ್ತಷ್ಟು ಆಹಾರ ಸಮಸ್ಯೆ ಉಂಟಾಗುತ್ತದೆ.

ಈಗಿನ ಜನಸಂಖ್ಯೆಗೆ ಅನುಗುಣವಾಗಿ ಬಟ್ಟೆ ವ್ಯವಸ್ಥೆ ಇದೆ. ಆದರೆ ಸತ್ತವರೆಲ್ಲ ಬದಕಿದರೆ ಅವರಿಗೂ ಬಟ್ಟೆ ಒದಗಿಸಿಲು ಇನ್ನಷ್ಟು ವೆಚ್ಚ ಮಾಡಬೇಕಾಗುತ್ತದೆ. ಇದರಿಂದ ಆರ್ಥಿಕ ಹೊರೆ ಹೆಚ್ಚಾಗುತ್ತದೆ. ಬೆಲೆಗಳು ಇನ್ನಷ್ಟು ತುಟ್ಟಿಯಾಗುತ್ತವೆ.

ಇವೆಲ್ಲಕ್ಕಿಂತ ಗಂಭೀರವಾದ ಪರಿಣಾಮವನ್ನು ಎಲ್ಲರೂ ಎದುರಿಸಬೇಕಾಗುತ್ತದೆ. ಅದೇನೆಂದರೆ, ಈಗಿನ ತಂದೆ ತಾಯಿಯರನ್ನೇ ಪಾಲನೆ ಪೋಷಣೆ ಮಕ್ಕಳು, ಸತ್ತವರು ಜೀವ ಪಡೆದು ಬಂದರೆ ಅವರನ್ನು ಪೋಷಿಸುವರೇ? ಹೌದು. ಇದು ಎಲ್ಲಕ್ಕಿಂತ ಗಂಭೀರ ಸಮಸ್ಯೆಯಾಗಿದೆ. ಬಹುತೇಕ ಪಾಲಕರು ಈಗಾಗಲೇ ಅನಾಥಾಶ್ರಮ ಹಾಗೂ ವೃದ್ದಾಶ್ರಮಗಳಲ್ಲಿ ಕಾಲ ಕಳೆಯುತ್ತಿದ್ದಾರೆ. ಸತ್ತವರು ಎದ್ದು ಬಂದರೆ ಈ ಅನಾಥಾಶ್ರಮ ಹಾಗೂ ವೃದ್ಧಾಶ್ರಮಗಳೆಲ್ಲ ತುಂಬಿ ತುಳುಕತೊಡಗುತ್ತವೆ.

# ಬೌದ್ಧ ಧರ್ಮದ ನಿಯಮಗಳು

ಆಸೆಯೇ ದುಃಖಕ್ಕೆ ಮೂಲ ಎಂದು ಸಾರಿದ ಭಗವಾನ್ ಬುದ್ಧನು ಮಹಾರಾಜ ಶುದ್ಧೋದನ ಮತ್ತು ಮಾಯಾ ದೇವಿಯರ ಮಗ. ಇಂದಿನ ನೇಪಾಳ ರಾಜ್ಯದಲ್ಲಿನ ಲುಂಬಿನಿ ಎಂಬ ಪ್ರದೇಶದ ಕಪಿಲವಸ್ತುವಿನಲ್ಲಿ ಜನಿಸಿದ ಈ ಮಗು ಹುಟ್ಟಿದ ಒಂದು ವಾರಕ್ಕೆ ತಾಯಿಯನ್ನು ಕಳೆದುಕೊಂಡು ತಂದೆಯ ಮತ್ತೋರ್ವ ರಾಣಿಯಾದ ಗೌತಮಿಯ ಆರೈಕೆಯಲ್ಲಿ ಬೆಳೆದ ಆದ್ದರಿಂದ ಈತನನ್ನು ಗೌತಮಿಪುತ್ರ ಸಿದ್ಧಾರ್ಥ ಎಂದು ಕರೆದರು.

ಹುಟ್ಟಿದ ಮಗುವನ್ನು ನೋಡಿದ ಜ್ಯೋತಿಷಿಗಳು ಈ ಮಗು ಜಗತ್ತಿನ ಜನರ ದುಃಖ ದಾರಿದ್ರ್ಯಗಳಿಗೆ ಉತ್ತರವಾಗಿ ಹುಟ್ಟಿರುವುದರಿಂದ ಈತ ಐಹಿಕ ಸುಖ ಭೋಗಗಳನ್ನು ಅನುಭವಿಸದೆ ಪಾರಮಾರ್ಥಿಕ ಜೀವನಕ್ಕೆ ಮನಸ್ಸು ಮಾಡುತ್ತಾನೆ ಎಂದು ಹೇಳಿದರು. ಇದರಿಂದ ಮಹಾರಾಜ ಶುದ್ಧೋದನ ಕಳವಳಗೊಂಡು ತನ್ನ ಮಗನ ಕಣ್ಣಿಗೆ ಲೋಕದ ದುಃಖ ದಾರಿದ್ರ್ಯಗಳು ಬೀಳದಂತೆ ಎಚ್ಚರಿಕೆಯಿಂದ ಬೆಳೆಸುತ್ತಾನೆ. ಪ್ರಾಪ್ತ ವಯಸ್ಸಿಗೆ ಬರುತ್ತಲೇ ಗೌತಮನೊಂದಿಗೆ ಮನೆಯಲ್ಲಿಯೇ ಬೆಳೆದ ಜೊತೆಗಾತಿ ಯಶೋಧರೆಯೊಂದಿಗೆ ವಿವಾಹ ಏರ್ಪಡಿಸುತ್ತಾನೆ.

ವೈವಾಹಿಕ ಜೀವನದ ಪರಿಣಾಮವಾಗಿ ಗೌತಮನಿಗೆ ಮಗು ರಾಹುಲ ಜನಿಸಿ ಇವರ ಸಂತಸಕ್ಕೆ ಕಾರಣನಾದನು. ಮಗುವಿಗೆ ಇನ್ನೂ ಒಂದು ವರ್ಷ ತುಂಬುವ ಹೊತ್ತಿಗೆ ಒಂದು ದಿನ ತನ್ನ ಸಾರಥಿಯೊಂದಿಗೆ ಮೊದಲ ಬಾರಿಗೆ ಹೊರ ಸಂಚಾರಕ್ಕೆ ಬಂದ ಸಿದ್ದಾರ್ಥನು ಒಬ್ಬ ವೃದ್ಧ ರೋಗಿ ಓರ್ವ ಮೃತ ವ್ಯಕ್ತಿ ಮತ್ತು ಓರ್ವ ಸನ್ಯಾಸಿಯನ್ನು ಭೇಟಿಯಾದನು. ಜೀವನವನ್ನು ಆತ ನೋಡುವ ದೃಷ್ಟಿಕೋನವೇ ಬದಲಾಯಿತು. ಜನನ ಮರಣಗಳ ಚಕ್ರ ಮತ್ತು ಪ್ರಾಪಂಚಿಕ ಸುಖಗಳು ಎಂಬ ಭ್ರಮೆಯ ಹಿಂದೆ ಸುತ್ತುತ್ತಿರುವ ಮನುಷ್ಯ ಜೀವನ ಅದೆಷ್ಟು ಕ್ಷಣಿಕ ಎಂಬ ಅರಿವಾದಾಗ ಭೇಟಿಯಾದ ಸನ್ಯಾಸಿಯ ಮಾತು ಆತನ ಸಂಪೂರ್ಣ ಬದುಕನ್ನು ಬದಲಾಯಿಸಿತು. ಮನದಲ್ಲಿಯೇ ಸಾಕಷ್ಟು ಚಿಂತನ ನಡೆಸಿದ ಸಿದ್ಧಾರ್ಥ ಅಂದಿನ ರಾತ್ರಿಯೇ ತನ್ನ ಅರಮನೆಯನ್ನು ತೊರೆದು ತನ್ನ ಸಾರಥಿ ಚಂದಕ(ಚನ್ನ) ಮತ್ತು ಕುದುರೆ ಕಂದಕರೊಂದಿಗೆ ಹೊರಟು ಅರಣ್ಯದ ಮಧ್ಯ ಭಾಗಕ್ಕೆ ಬಂದು ಅವರನ್ನು ಮರಳಿ ಹೋಗಲು ಕೇಳಿಕೊಂಡು ತಾನು ಭಾರ್ಗವಾಶ್ರಮಕ್ಕೆ ಹೊರಟು ಹೋಗುತ್ತಾನೆ.ಅಲ್ಲಿಂದ ಮುಂದೆ ಮಗಧ ದೇಶಕ್ಕೆ ಪ್ರಯಾಣಿಸಿ ಮಗಧದ ರಾಜಗೃಹದಲ್ಲಿ ಮೊದಲ ಬಾರಿ ಭಿಕ್ಷಾನ್ನವನ್ನುಂಡನು. ಮಗಧದ ಅರಾಡ ಕಾಲಾಮನೆಂಬ ತಪಸ್ವಿಯ ಬಳಿ ಕೆಲಕಾಲ ಶಿಷ್ಯನಾಗಿದ್ದನು. ಮುಂದೆ ವಿವಿಧ ಪಂಥಗಳ ಗುರುಗಳ ಬಳಿ ಸುಮಾರು ಆರು ವರ್ಷಗಳ ಕಾಲ ತಿರುಗಾಡಿ ದೇಹದಂಡನೆ ಮಾಡಿ ನಿರಾಹಾರ ಕಾಯಕ್ಲೇಶಗಳನ್ನು ಮಾಡಿದ ಆತನಿಗೆ ಅಂತಿಮವಾಗಿ ಅರಿವಾದದ್ದು ಇದಾವುದರಿಂದಲು ಸಿದ್ಧಿ ಸಾಧ್ಯವಾಗುವುದಿಲ್ಲ ಎಂದು. ಸಾಧನೆಯ ದಾರಿಯನ್ನು ಹುಡುಕುವ ನಿಟ್ಟಿನಲ್ಲಿ ಆತ ಸುಜಾತ ಎಂಬ ಮಹಿಳೆ ತಂದುಕೊಟ್ಟ ಪಾಯಸವನ್ನು ಕುಡಿದು



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಬೋಧಿವೃಕ್ಷದಕೆಳಗೆಪದ್ಮಾಸನಸ್ಥಿತನಾಗಿ ಕುಳಿತ ಆತನಿಗೆ ಒಂದು ವಾರದ ಬಳಿಕ ವೈಶಾಖ ಶುದ್ಧ ಹುಣ್ಣಿಮೆಯ ದಿನ ಒಂದೇ ರಾತ್ರಿಯಲ್ಲಿ ನಾಲ್ಕು ಜಾವ ಗಳ ಅನುಭವದ ಮೂಲಕ ಸಂಕಲ್ಪ ಸಿದ್ಧಿಯಾಗಿ ಬದುಕಿನ ಪರಿಪೂರ್ಣ ಜ್ಞಾನೋದಯವನ್ನು ಪಡೆದುಕೊಂಡನು.ಒಂದೊಂದು ಜಾವದಲ್ಲಿಯೂ ಆತನಿಗೆ ದೊರೆತ ಅರಿವು

**1.ಜನ್ಮಜನ್ಮಾಂತರಗಳ ತಿಳುವಳಿಕೆ**

**2. ನಿತ್ಯಾನಿತ್ಯ ವಸ್ತುಗಳ ವಿವೇಕೋದಯ**

**3. ಹುಟ್ಟು ಸಾವುಗಳ ದುಃಖಕ್ಕೆ ಮನುಷ್ಯನ ಕ್ಷಣಿಕ ಆಸೆಯೇ ಕಾರಣ**

4. ಆಧ್ಯಾತ್ಮಿಕ ತತ್ವದ ಸಾಕ್ಷಾತ್ಕಾರಗಳು ಆತನಿಗೆ ದೊರೆತು ಆತ ಗೌತಮನಿಂದ ಬುದ್ಧನಾಗಿ ಪರಿವರ್ತಿತನಾದ. ತನ್ನೆಲ್ಲ ಅರಿವಿನ ಸಾರವನ್ನು ಕೆಲ ಸಂಹಿತೆಗಳ ಮೂಲಕ ಹಿಡಿದಿಟ್ಟು ಬೌದ್ಧ ಸೂತ್ರಗಳನ್ನು ಜನರ ಬದುಕಿನ ಸುಧಾರಣೆಗೆ ಮೀಸಲಾಗಿಟ್ಟನು.ಮುಂದೆ ಸುಮಾರು 45 ವರ್ಷಗಳ ಕಾಲ ಆತ ಬೌದ್ಧ ತತ್ವಗಳನ್ನು ಬೋಧಿಸುತ್ತಾ ಜನರಲ್ಲಿ ಜ್ಞಾನದ ಅರಿವನ್ನು ಮೂಡಿಸುತ್ತ ಲೋಕ ಸಂಚಾರಿಯಾಗಿ, ಭಿಕ್ಷುವಾಗಿ ಜನರಲ್ಲಿ ಜ್ಞಾನದ ಬೆಳಕನ್ನು ಹಂಚಿದ.



ಬೌದ್ಧಿಕ ಜ್ಞಾನದ ಅರಿವಿನ ಹಾದಿಯಲ್ಲಿ ಆತ ಕೆಲ ಕಟ್ಟಳೆಗಳನ್ನು ರೂಢಿಸಿಕೊಂಡಿದ್ದು ಅವುಗಳು ಇಂತಿವೆ.

* ಜೀವಿಗಳಲ್ಲಿಯೇ ಅತ್ಯಂತ ಬುದ್ಧಿವಂತ ಅನ್ನಿಸಿಕೊಂಡಿರುವ ಮಾನವ ಜೀವಿಯು ಯಾರನ್ನು ಹಿಂಸಿಸಬಾರದು, ಬೇರೊಬ್ಬರನ್ನು ನೋಯಿಸಬಾರದು ಎಂಬ 'ಅಹಿಂಸಾ ಪರಮೋಧರ್ಮ' ಎಂಬ ಮಾತು ಬುದ್ಧನ ಮೊದಲ ಕಟ್ಟಳೆಯಾಗಿತ್ತು.

* ಬೇರೊಬ್ಬರ ಕುರಿತು ಮಾತನಾಡುವುದು, ಸುಳ್ಳು ಸುದ್ದಿಯನ್ನು ಹರಡುವುದು ಒರಟಾಗಿ ಮಾತನಾಡುವುದು ಅನವಶ್ಯಕ. ಇದರಿಂದ ಯಾವುದೇ ಪ್ರಯೋಜನವಿಲ್ಲ ಎಂಬುದು ಬುದ್ಧನ ಎರಡನೆಯ ಕಟ್ಟಳೆಯಾಗಿತ್ತು.

* ಲೈಂಗಿಕ ದುರ್ವರ್ತನೆಯಿಂದ ದೂರವಿರಬೇಕು. ಕ್ಷಣಿಕ ಸುಖದ ಆಸೆಗಳು ಮನುಷ್ಯನನ್ನು ತಪ್ಪು ದಾರಿಗೆ ಎಳಸುವಂತೆ ಮಾಡುತ್ತವೆ. ಆದ್ದರಿಂದ ಕೌಟುಂಬಿಕ ಚೌಕಟ್ಟಿನಲ್ಲಿ, ಸರಿಯಾದ ಸಾಮಾಜಿಕ ನಿಯಮಗಳ ಮಾರ್ಗದಲ್ಲಿ ಐಹಿಕ ಭೋಗಗಳನ್ನು ಅನುಭವಿಸಬೇಕು ಎಂಬುದು ಬುದ್ಧನ ಮೂರನೇ ಕಟ್ಟಳೆಯಾಗಿತ್ತು.

* ಅಮಲು ಬರಿಸುವ ಮಾದಕ ಪದಾರ್ಥ ಮತ್ತು ದುಶ್ಚಟಗಳಿಂದ ದೂರವಿರಬೇಕು. ಮಾದಕ ಪದಾರ್ಥಗಳು ಮೊದಮೊದಲು ಸುಖ ಕೊಟ್ಟಂತೆ ತೋರಿದರೂ ಮುಂದೆ ಚಟವಾಗಿ ಪರಿಣಮಿಸುತ್ತವೆ. ಈ ದುಶ್ಚಟಗಳು ಮನುಷ್ಯನನ್ನು ವಿನಾಶದ ಹಾದಿಗೆ ಕರೆದೊಯ್ಯುತ್ತವೆ. ಆದ್ದರಿಂದ ವ್ಯಕ್ತಿಯು ಮಾದಕ ವ್ಯಸನವನ್ನು ಹೊಂದಿರಲೇಬಾರದು ಎಂಬುದು ಬುದ್ಧನ ನಾಲ್ಕನೆಯ ಕಟ್ಟಳೆಯಾಗಿತ್ತು.

* ನಮ್ಮದಲ್ಲದ ವಸ್ತುವಿಗೆ ಎಂದೂ ನಾವು ಆಶಿಸಬಾರದು ಎಂಬ ಅಪರಿಗ್ರಹ ಭಾವವನ್ನು ಹೊಂದಿರಬೇಕು.

ಹೀಗೆ ತನ್ನ ಜ್ಞಾನದ ಸಾರವನ್ನು 5 ನಿಯಮಗಳಲ್ಲಿ ಹಿಡಿದಿಟ್ಟ ಗೌತಮ ಬುದ್ಧನು ಮನುಕುಲವನ್ನು ಉದ್ಧರಿಸಿದ ಮಹಾನ್ ಚೇತನಗಳಲ್ಲಿ ಒಬ್ಬನಾಗಿದ್ದಾನೆ. ಬುದ್ಧನ ಸಂದೇಶದ ಹೊಂಬೆಳಕಿನಲ್ಲಿ ನಾವು ಕೂಡ ನಡೆದು ನಮ್ಮ ಬದುಕನ್ನು ಸಾರ್ಥಕಗೊಳಿಸಿಕೊಳ್ಳೋಣ ಎಂಬ ಆಶಯದೊಂದಿಗೆ..

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ತೋಟಗಾರಿಕೆ ಚಟುವಟಿಕೆಗಳಿಗೆ ಅರ್ಜಿ ಅಹ್ವಾನ

## ಗಣಿಭಾದಿತ 33 ಗ್ರಾಮಗಳಲ್ಲಿ ಪರಿಸರ ಪುನಶ್ಚೇತನ ಯೋಜನೆಯಡಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ತಾಲೂಕಿನ ಗಣಿಭಾದಿತ 33 ಗ್ರಾಮಗಳಲ್ಲಿ ಸಮಗ್ರ ಗಣಿ ಪರಿಸರ ಪುನಶ್ಚೇತನ ಯೋಜನೆಯಡಿ (ಸಿಇಪಿಎಂ ಐಜೆಡ್) ತೋಟಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಆಸಕ್ತ ರೈತರಿಂದ ಅರ್ಜಿ ಅಹ್ವಾನಿಸಿದೆ.

ತೋಟಗಾರಿಕೆ ಚಟುವಟಿಕೆಗಳಾದ ಪ್ರದೇಶ ವಿಸ್ತರಣೆ, ಕೃಷಿ ಹೊಂಡ ನಿರ್ಮಾಣ, ಪ್ಯಾಕ್ ಹೌಸ್, ಈರುಳ್ಳಿ ಶೇಖರಣಾ ಘಟಕ, ಜೇನು ಸಾಕಾಣಿಕೆ, ಅಣಬೆ ಬೇಸಾಯ, ಹಾಗೂ ಇತರೆ ಸೌಲಭ್ಯಗಳಿಗೆ ಆಸಕ್ತ ರೈತರು ಕೂಡಲೇ ತೋಟಗಾರಿಕೆ ಇಲಾಖೆ ಹೊಸಪೇಟೆ ಸಂಪರ್ಕಿಸಿ ಅರ್ಜಿ ಸಲ್ಲಿಸಿ ಹೆಸರನ್ನು ನೊಂದಾಯಿಸಿಕೊಳ್ಳಲು ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ರೈತರು ಆಯಾ ಹೋಬಳಿಯ ತೋಟಗಾರಿಕೆ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ. ಸಹಾಯಕ ತೋಟಗಾರಿಕೆ ಅಧಿಕಾರಿ, ರೈತ ಸಂಪರ್ಕ ಕೇಂದ್ರ ಹೊಸಪೇಟೆ, ಮರಿಯಮ್ಮನಹಳ್ಳಿ, ಕಮಲಾಪುರ, ಸೇರಿದಂತೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ, ಹೊಸಪೇಟೆ ಇಲ್ಲಿ ಸಂಪರ್ಕಿಸಲು ತಿಳಿಸಿದ್ದಾರೆ.

# ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಲೇಖಕರಿಂದ ಪುಸ್ತಕ ನೋಂದಣಿಗೆ ಅವಕಾಶ

■ **ಹಂಪಿ ಟೈಮ್ಸ್ ಹೊಸಪೇಟೆ**

2024ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ಪುಸ್ತಕ ಗಳನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಯಾವುದೇ ಭಾಷೆಯ ಪುಸ್ತಕಗಳ ನೋಂದಣಿ ಮಾಡಿಸಬಹುದಾಗಿದೆ.

ನೋಂದಣಿ ಮಾಡಿಸಿದ ಪುಸ್ತಕಗಳನ್ನು ಮಾತ್ರ ಆಯ್ಕೆಗೆ ಪರಿಗಣಿಸಲಾಗುವುದು. ರಾಜ್ಯ ಕೇಂದ್ರ ಗ್ರಂಥಾಲಯದಲ್ಲಿ 2025ರ ಜನವರಿ 1 ಸಂಜೆ 5.30ರ ಒಳಗಾಗಿ ನೋಂದಣಿ ಮಾಡಿಸಲು ಅವಕಾಶವಿರುತ್ತದೆ.

ಆಯ್ಕೆ ಸಮಿತಿಗೆ ಆಯ್ಕೆಗಾಗಿ ಪುಸ್ತಕಗಳನ್ನು ಸಲ್ಲಿಸಲು ಇಚ್ಛಿಸುವ ಲೇಖಕರು, ಲೇಖಕ–ಪ್ರಕಾಶಕರು ಮತ್ತು ಪ್ರಕಾಶಕರು ನಿಗದಿತ ಅವಧಿಯೊಳಗೆ ರಾಜ್ಯ ಕೇಂದ್ರ ಗ್ರಂಥಾಲಯ ದಲ್ಲಿ ಪುಸ್ತಕಗಳ ನೋಂದಣಿ ಅಧಿನಿಯಮ ದಡಿ ನಿಯಮಾನುಸಾರ ಪುಸ್ತಕಗಳನ್ನು ಸಲ್ಲಿಸಬೇಕು.

ನೋಂದಣಿಗಾಗಿ ನಿಗದಿತ ಅರ್ಜಿ ನಮೂನೆ ಹಾಗೂ ಮಾಹಿತಿಯನ್ನು ಇಲಾಖಾ ಅಂತರ್ಜಾಲ www.dpl.karnataka.gov.in ಮತ್ತು ರಾಜ್ಯದ ಜಿಲ್ಲಾ ಅಥವಾ ನಗರ ಕೇಂದ್ರ ಗ್ರಂಥಾಲಯಗಳ ಉಪ ನಿರ್ದೇಶಕರು ಅಥವಾ ಮುಖ್ಯ ಗ್ರಂಥಾಲಯಾಧಿಕಾರಿಗಳ ಕಚೇರಿಗಳಲ್ಲಿ ಪಡೆಯ ಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಆಯುಕ್ತರ ಕಚೇರಿಯ ದೂರವಾಣಿ ಸಂಖ್ಯೆ: 080–22864990, 22867358 ಮತ್ತು ಹೊಸಪೇಟೆ ಜಿಲ್ಲಾ ಕ್ರೀಡಾಂಗಣ ಹತ್ತಿರದ ನಗರ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿಗಳನ್ನು ಸಂಪರ್ಕಿಸ ಬಹುದಾಗಿದೆ ಎಂದು ಪ್ರಕಟಣೆ ತಿಳಿಸದೆ.

Greetings
You can also say
Ads Starts from Rs.1000
Contact: 94486 33038

## ಕವಿ ಮನಸು


### ಬಂಧನದ ಬದುಕು

ಗೂಡಿನಲ್ಲಿ ಬಂಧಿಯಾಗಿ
ದೂಡುತಿಹುದು ನೋವ ನುಂಗಿ
ಜೋಡಿಯಿರದೆ ಹಕ್ಕಿಯೊಂದು ನೊಂದು
ನಲುಗಿದೆ
ಕಾಡಿನಲ್ಲಿ ಬಳಗದೊಡನೆ
ಕೂಡಿಯಾಡಿದಂಥ ನೆನಪು
ಕಾಡದಿಹುದೆ ಸುಖದ ಬದುಕು ಮರಳಿ
ಸಿಗುವುದೆ

ಗಿಳಿಯು ಸಹಿತ ಮನುಜನಂತೆ
ಬಳಗದೊಡನೆ ಕೂಡಿಯಾಡಿ
ಕಳೆಯುತಿತ್ತು ಬದುಕನಲ್ಲಿ ಹಾಡಿ ನಲಿಯುತ
ಬಳಿಯಲೀಗ ಬಳಗವಿಲ್ಲ
ಕಳೆದು ಹೋಯ್ತು ನಲಿವ ದಿನವು
ಕಳೆಯಲೆಂತು ಬದುಕನಿಂತು ನೋವು
ನುಂಗುತ

ತಿಂಡಿ ತೀರ್ಥ ಕೊಡುವೆರೆಂದು
ಮಂಡಿಯೂರಿ ನಮಿಸದೆಂದು
ಕೊಂಡಿ ಕಳೆದು ಬಳಗವಗಲಿ ಸುಖವು
ಸಾಧ್ಯವೆ
ಕಂಡ ಹಕ್ಕಿ ಸೊಗಸಿದೆಂದು
ತಂದು ಗೂಡಲಿರಿಸಿಕೊಂಡು
ಭಂಡತನವ ಮೆರೆವೆಯಲ್ಲ ಕರುಣೆ ಬೇಡವೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್




### ಭಾರತೀಯ ಅಂಚೆ ಇಲಾಖೆಯಿಂದ

# ರಾಷ್ಟ್ರಮಟ್ಟದ ಪತ್ರಲೇಖನ ಸ್ಪರ್ಧೆ

## ಅಂಚೆ ಅಧೀಕ್ಷಕರು ಪಿ.ಚಿದಾನಂದ ಹೇಳಿಕೆ । ಬಹುಮಾನ ರೂ.50,000/–, 25000/–

■ **ಹಂಪಿ ಟೈಮ್ಸ್ ಹೊಸಪೇಟೆ**

ಜನಸಾಮಾನ್ಯರಲ್ಲಿ ಹಾಗೂ ವಿಧ್ಯಾರ್ಥಿಗಳಲ್ಲಿ ಪತ್ರ ಲೇಖನ ಅಭಿರುಚಿಯನ್ನು, ಬರವಣಿಗೆ ಕೌಶಲ್ಯವನ್ನು ಹಾಗೂ ದೇಶಪ್ರೇಮ



ಜಾಗೃತಿಗೊಳಿಸಲು ಭಾತೀಯ ಅಂಚೆ ಇಲಾಖೆಯು ದೇಶ್ಯಾದ್ಯಂತ ರಾಷ್ಟ್ರಮಟ್ಟದ ಮುಕ್ತ ಪತ್ರಲೇಖನ ಸ್ಪರ್ಧೆ ಯನ್ನು ಏರ್ಪಡಿಸಲಾಗಿದ್ದು, ಅತ್ಯುತ್ತಮ ಪತ್ರ ಬರೆದ ಸ್ಪರ್ಧಾರ್ಥಿಗಳಿಗೆ ಬಹುಮಾನ ನೀಡಲಾಗುತ್ತದೆ ಎಂದು ಬಳ್ಳಾರಿ ವಿಭಾಗದ ಅಂಚೆ ಅಧೀಕ್ಷಕರು ಪಿ.ಚಿದಾನಂದ ತಿಳಿಸಿದ್ದಾರೆ.

The Joy of writing: Importance of letters in a Digital Age"/ ಬರವಣಿಗೆಯ ಸಂತೋಷ: ಡಿಜಿಟಲ್ ಯುಗದಲ್ಲಿ ಅಕ್ಷರಗಳ ಎಂಬ ವಿಷಯದ ಮೇಲೆ ಎ4 ಅಳತೆಯ ಹಾಳೆಯಲ್ಲಿ 1000 ಪದಗಳ ಮಿತಿಯೊಳಗೆ ಬರೆದು ಎನ್ವೊಲಾಪ್ (ENVELOPE) ನಲ್ಲಿ ಅಥವಾ ILC (ಇನ್ ಲ್ಯಾಂಡ್) ಅಂತರ್ದೇಶೀಯ ಪತ್ರದಲ್ಲಿ 500 ಪದಗಳಿಗೆ ಮೀರದಂತೆ ಬರೆದು, ಬಳ್ಳಾರಿ ವಿಭಾಗದ ಎಂದರೆ ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಯ ಸ್ಪರ್ಧಿಗಳು ಅಂಚೆ ಅಧೀಕ್ಷಕರು, ಬಳ್ಳಾರಿ ವಿಭಾಗ, ಬಳ್ಳಾರಿ 583102 ಇವರಿಗೆ ತಲುಪುವಂತೆ ಅಂಚೆಮೂಲಕ ಕಳಿಹಿಸಿಕೊಡಬಹುದು.

ಪತ್ರವನ್ನು ಕನ್ನಡ, ಹಿಂದಿ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಬರೆಯ ಬಹುದಾಗಿದ್ದು ಡಿ.14ರ ಒಳಗೆ ತಲುಪುವಂತೆ ಪತ್ರಗಳನ್ನು ಕಳುಹಿಸಿಕೊಡಬೇಕು. ಮುದ್ರಿತ ಪತ್ರಗಳನ್ನು ಸ್ವೀಕರಿಸುವುದಿಲ್ಲ.

18 ವರ್ಷ ಒಳಗಿನ ಮತ್ತು 18 ವರ್ಷ ಮೇಲ್ಪಟ್ಟ ಎಂಬ ಎರಡು ವಿಭಾಗಗಳಿದ್ದು ರಾಷ್ಟ್ರಮಟ್ಟದ ಪ್ರತಿವಿಭಾಗಕ್ಕೆ ಅತ್ಯುತ್ತಮ ಪತ್ರಕ್ಕೆ ಪ್ರಥಮ ಬಹುಮಾನ ರೂ.50,000/– ಹಾಗೂ ರಾಜ್ಯಮಟ್ಟದ ಅತ್ಯುತ್ತಮ ಪತ್ರಕ್ಕೆ ಪ್ರಥಮ ಬಹುಮಾನ ರೂ.25,000/– ಗಳ



ನಗದು ಬಹುಮಾನವಿದ್ದು, ದ್ವಿತೀಯ/ತೃತೀಯ ಸ್ಥಾನಕ್ಕೂ ನಗದು ಬಹುಮಾನಗಳು ನೀಡಲಾಗುವುದು.

ಬಳ್ಳಾರಿ ವಿಭಾಗದ ವ್ಯಾಪ್ತಿಯ ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸಮೀಪದ ಅಂಚೆಕಚೇರಿ ಅಥವಾ ಈ ಕೆಳಕಂಡ ದೂರವಾಣಿ ಸಂಖ್ಯೆಗಳಿಗೆ 8392–266037/ ಹನುಮಂತ ರೆಡ್ಡಿ ಮೊಬೈಲ್ 9880979730– ವಿ ಎಸ್ ಕೃಷ್ಣ 94807 22701. ಸಂಪರ್ಕಿಸಬಹುದೆಂದು ತಿಳಿಸಿದ್ದಾರೆ.

# ಕ್ಷಯಮುಕ್ತ ಭಾರತ ನಿರ್ಮಿಸಲು ಸಹಕರಿಸಿ

## ಕ್ಷಯರೋಗ ಸಂದರ್ಶಕ ಕಾಸಿಮ್‌ಸಾಬ್ ಹೇಳಿಕೆ। ಅರಿವು ಕಾರ್ಯಕ್ರಮ

■ **ಹಂಪಿ ಟೈಮ್ಸ್ ಹೊಸಪೇಟೆ**

ಕ್ಷಯರೋಗವು (ಟಿಬಿ) ಮುಖ್ಯವಾಗಿ ಶ್ವಾಸಕೋಶದ ಮೇಲೆ ಪರಿಣಾಮ ಬೀರುವ ಗಂಭೀರ ಕಾಯಿಲೆಯಾಗಿದ್ದು ಕ್ಷಯಮುಕ್ತ ಭಾರತ ನಿರ್ಮಾಣಕ್ಕಾಗಿ ಸಾರ್ವಜನಿಕರು ಕೈಜೋಡಿಸಬೇಕೆಂದು ಕ್ಷಯರೋಗ ಸಂದರ್ಶಕ ಕಾಸಿಮ್ ಸಾಬ್ ಹೇಳಿದರು.

ನಗರದಲ್ಲಿ ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಜಿಲ್ಲಾ ಕ್ಷಯರೋಗ ನಿರ್ಮೂಲನ ಕೇಂದ್ರದಿಂದ ಏರ್ಪಡಿಸಿದ್ದ ಕ್ಷಯರೋಗದ ಅರಿವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಶುಕ್ರವಾರ ಮಾತನಾಡಿದರು. ಕ್ಷಯರೋಗವನ್ನು ಉಂಟುಮಾಡುವ ಸೂಕ್ಷ್ಮಜೀವಿಗಳು ಒಂದು ರೀತಿಯ ಬ್ಯಾಕ್ಟೀರಿಯಾವಾಗಿದ್ದು, ಕಾಯಿಲೆ ಇರುವ ವ್ಯಕ್ತಿ ಕೆಮ್ಮಿದಾಗ, ಸೀನಿದಾಗ ಅಥವಾ ಹಾಡಿದಾಗ ಕ್ಷಯರೋಗ ಹರಡಬಹುದು. ಸೂಕ್ಷ್ಮಜೀವಿಗಳು ಶ್ವಾಸಕೋಶವನ್ನು ಪ್ರವೇಶಿಸುತ್ತವೆ. ಜನಸಂದಣಿಯಲ್ಲಿ ಜನರು ಸೇರುವ ಸ್ಥಳದಲ್ಲಿ ಅಥವಾ ಜನರು ಕಿಕ್ಕಿರಿದ ಸ್ಥಿತಿಯಲ್ಲಿ ವಾಸಿಸುವ ಸ್ಥಳದಲ್ಲಿ ಕ್ಷಯರೋಗವು ಸುಲಭವಾಗಿ ಹರಡುತ್ತದೆ. ಹಾಗಾಗೀ ಸಾರ್ವಜನಿಕರಿಗೆ ಕ್ಷಯರೋಗದ ಬಗ್ಗೆ ಅರಿವು ಮೂಡಿಸಿದಲ್ಲಿ ಕ್ಷಯಮುಕ್ತ ಸಮಾಜ ನಿರ್ಮಿಸಲು ಸಾಧ್ಯವಾಗಲಿದೆ ಎಂದರು.

ಬಳಿಕ ನಗರ ಅರೋಗ್ಯ ಕೇಂದ್ರದ ಅರೋಗ್ಯ ನಿರೀಕ್ಷಣ ಅಧಿಕಾರಿ ಯಶೋಧ ಮಾತನಾಡಿ, ಕ್ಷಯರೋಗದ ಲಕ್ಷಣಗಳಲ್ಲಿ ಪ್ರಮುಖವಾಗಿ ಎರಡು ವಾರಕ್ಕಿಂತ ಹೆಚ್ಚು ಕೆಮ್ಮು, ಕಫದಲ್ಲಿ ರಕ್ತ ಬೀಳುವುದು, ಕ್ರಮೇಣ ದೇಹದಲ್ಲಿ ತೂಕ ಕಡಿಮೆ ಆಗುವುದು, ಹಸಿವು ಆಗದೇ ಇರುವುದು, ರಾತ್ರಿ ವೇಳೆ ಬೆವರುವುದು, ಎದೆಯಲ್ಲಿ ನೋವು ಬರುವುದು, ಸಂಜೆ ವೇಳೆ ಜ್ವರ ಬರುವುದು. ಹೀಗೆ ಮುಂತಾದ ಲಕ್ಷಣಗಳು ಕಂಡು ಬಂದರೆ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಉಚಿತವಾಗಿ ಕಫ ಪರೀಕ್ಷೆ ಮಾಡಿಸಿಕೊಳ್ಳಬೇಕು. ಕ್ಷಯ ಎಂದು ಧೃಡಪಟ್ಟಲ್ಲಿ ಆಪ್ತ ಸಮಾಲೋಚಕರಿಂದ ಉಚಿತವಾಗಿ ಮಾತ್ರೆಗಳನ್ನು ಪಡೆಯಬಹುದಾಗಿದೆ. ಜೊತೆಗೆ 'ನಿಕ್ಷಯ ಪೋಷಣ್' ಯೋಜನೆಯಡಿಯಲ್ಲಿ ಪೌಷ್ಟಿಕ ಆಹಾರ ಸೇವನೆಗಾಗಿ ಪ್ರತಿ ತಿಂಗಳ 500 ರೂಗಳಂತೆ 6 ತಿಂಗಳವರೆಗೆ ರೋಗಿಯ ಖಾತೆಗೆ ಸರ್ಕಾರದಿಂದಲೇ ಭರಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಈ ಕಾರ್ಯಕ್ರಮದಲ್ಲಿ ಆಶಾ ಕಾರ್ಯಕರ್ತೆಯರು, ಆರೋಗ್ಯ ಇಲಾಖೆ ಸಿಬ್ಬಂದಿಗಳು ಭಾಗವಹಿಸಿದ್ದರು

# ಸೌರ ಫಲಕಗಳ ಅಳವಡಿಕೆಗೆ ಶೇ.60 ಸಹಾಯಧನ

■ **ಹಂಪಿ ಟೈಮ್ಸ್ ಹೊಸಪೇಟೆ**

ಪ್ರಧಾನಮಂತ್ರಿ ಸೂರ್ಯ ಘರ್ ಮುಫ್ತ ಬಿಜಲಿ ಯೋಜನೆಯ ಅಡಿಯಲ್ಲಿ ಸೌರ ಫಲಕಗಳನ್ನು ಸ್ಥಾಪಿಸಲು ಮಾನದಂಡ ವೆಚ್ಚದ ಶೇ.60 ರಷ್ಟು ಸಹಾಯಧನ ಒದಗಿಸಲಾಗುವುದು.

ಸೋಲಾರ್ ರೂಫ್ ಟಾಪ್ ಸಿಸ್ಟಮ್‌ಗಳನ್ನು ಅಳವಡಿಸುವ ಮೂಲಕ ಉಚಿತ ವಿದ್ಯುತ್ ಒದಗಿಸುವ ಗುರಿಯನ್ನು ಹೊಂದಿರುವ ಸರ್ಕಾರದ ಮಹತ್ವಕಾಂಕ್ಷಿ ಯೋಜನೆ ಇದಾಗಿದ್ದು, ಭಾರತದ 1 ಕೋಟಿ ಕುಟುಂಬಗಳಿಗೆ ಲಾಭವಾಗುತ್ತದೆ ಎಂದು ನಿರೀಕ್ಷಿಸಲಾಗಿದೆ.

**ಸಹಾಯಧನ:** 1 ಕಿಲೋವ್ಯಾಟ್‌ಗೆ 30 ಸಾವಿರ ರೂ. 2 ಕಿಲೋವ್ಯಾಟ್‌ಗೆ ರೂ.60 ಸಾವಿರ, 3 ಕಿಲೋವ್ಯಾಟ್‌ಗೆ 78 ಸಾವಿರ ರೂಪಾಯಿಗಳ ಸಹಾಯಧನ ನೀಡಲಾವುದು.

**ಪ್ರಯೋಜನಗಳು:** ವಿದ್ಯುತ್ ಬಿಲ್ ಕಡಿಮೆ ಮಾಡುವ ಮೂಲಕ ಉಳಿತಾಯ, ಕಡಿಮೆ ನಿರ್ವಹಣಾ ವೆಚ್ಚ, ಸಬ್ಸಿಡಿಯೊಂದಿಗೆ ಒಂದು ಬಾರಿ ಹೂಡಿಕೆ, ಪರಿಸರ ಸ್ನೇಹಿ ವಿದ್ಯುತ್ ಉತ್ಪಾದನೆ, ಜೆಸ್ಕಾಂಗೆ ವಿದ್ಯುತ್‌ನ್ನು ಮಾರಾಟ ಮಾಡುವ ಲಾಭ, ತ್ವರಿತ ಮರುಪಾವತಿ ಅವಧಿ 4–6 ವರ್ಷಗಳು ಹಾಗೂ 25 ವರ್ಷ ದೀರ್ಘಬಾಳಿಕೆ ಬರುತ್ತದೆ. ಅರ್ಜಿ ಸಲ್ಲಿಸಲು ವೆಬ್ ಲಿಂಕ್ www.pmsuryaghar.gov.in, https://gescomsrtpv.in/SRTPV ಗಳಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ 1912 ಗೆ ಕರೆಮಾಡಿ ಅಥವಾ ಹತ್ತಿರದ ಜೆಸ್ಕಾಂ ಕಚೇರಿಗೆ ಭೇಟಿ ನೀಡಬಹುದಾಗಿದೆ ಎಂದು ಜೆಸ್ಕಾಂ ನ ಕಾರ್ಯ ಮತ್ತು ಪಾಲನ ನಗರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು (ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಫಸಲ್ ಬೀಮಾ ಯೋಜನೆಯಡಿ ಬೆಳೆ ವಿಮೆಗೆ ಅರ್ಜಿ ಅಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

2024–25 ನೇ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಬೆಳೆ ವಿಮೆ ನೊಂದಾಯಿಸಲು ರೈತರಿಂದ ಅಹ್ವಾನಿಸಲಾಗಿದೆ ಎಂದು ವಿಜಯನಗರ ಜಂಟಿ ಕೃಷಿ ನಿರ್ದೇಶಕ ಶರಣಪ್ಪ ಮುದಗಲ್ ತಿಳಿಸಿದ್ದಾರೆ.

ಈ ಯೋಜನೆಯಡಿ ತಿಳಿಸಿರುವ ಹಿಂಗಾರು ಹಂಗಾಮಿನಲ್ಲಿ ಬೆಳೆ ಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದ ರೈತರು ತಮ್ಮ ಬೆಳೆಗಳಿಗೆ ಬ್ಯಾಂಕುಗಳಲ್ಲಿ ವಿಮೆ ಮಾಡಿಸಬಹುದು.

ಬೆಳೆ ವಿಮೆ ಮಾಡಿಸಲು ವಿವಿಧ ಬೆಳೆಗಳಿಗೆ ಕೊನೆ ದಿನಾಂಕಗಳನ್ನು ನಿಗಧಿ ಪಡಿಸಲಾಗಿದೆ. ನೀರಾವರಿ ಮತ್ತು ಮಳೆಯಾಶ್ರಿತ ಬೆಳೆಗಳಾದ ಹುರುಳಿ(ಮಳೆಯಾಶ್ರಿತ), ಈರುಳ್ಳಿ (ನೀರಾವರಿ), ಸೂರ್ಯಕಾಂತಿ(ಮಳೆಯಾಶ್ರಿತ ಮತ್ತು ನೀರಾವರಿ) ಬೆಳೆಗಳಿಗೆ ನವಂಬರ್ 30, ಕಡಲೆ(ಮಳೆಯಾಶ್ರಿತ), ಜೋಳ (ನೀರಾವರಿ), ಮೆಕ್ಕೆಜೋಳ(ನೀರಾವರಿ), ಗೋಧಿ(ನೀರಾವರಿ) ಡಿಸೆಂಬರ್ 16, ರಾಗಿ (ನೀರಾವರಿ), ಕಡಲೆ (ನೀರಾವರಿ), ಗೋಧಿ (ನೀರಾವರಿ) ಡಿಸೆಂಬರ್ 31, ಭತ್ತ (ನೀರಾವರಿ), ಶೇಂಗಾ (ನೀರಾವರಿ), ರಾಗಿ (ನೀರಾವರಿ), ಸೂರ್ಯಕಾಂತಿ (ನೀರಾವರಿ), ಈರುಳ್ಳಿ (ನೀರಾವರಿ) 2025 ಫೆಬ್ರವರಿ 28 ಕೊನೆಯ ದಿನವಾಗಿದೆ. ಈ ಯೋಜನೆಯ ಲಾಭ ಪಡೆಯಲು ಯಾವುದೇ ಸ್ಥಳೀಯ ಬ್ಯಾಂಕ್‌ಗಳು, ಸಾರ್ವಜನಿಕ ಸೇವಾ ಕೇಂದ್ರಗಳನ್ನು (ಸಿಎಸ್‌ಸಿ) ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಹಾಗೂ ಸಹಾಯವಾಣಿ ನಂ:080–26564535 /080–26564536/080–26564537 ಮತ್ತು ಸಂರಕ್ಷಣೆ ಪೋರ್ಟಲ್ ಲಿಂಕ್‌ನ್ನು https://www.samrakshane.karnataka.gov.in ಬಳಸಲು ತಿಳಿಸಿದ್ದಾರೆ.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳಿಗೆಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

**10 ನೇ ತರಗತಿ** **ಹಿಂದಿ**

## समय की पहचान

**I . अनुरूपता :**

1) मातृभूमि : देश प्रेम की विशेषता :: समय की पहचान :------- **(समय की महत्व)**

2)आलस : परिश्रम :: लाभ : ------- **( नष्ट )**

3) मातृभूमि : भगवतीचरण वर्मा :: समय की पहचान : ------- **(सियारामशरण गुप्त )**

**II . एक वाक्य में उत्तर लिखिए |**

4)बहाने बनाने का कारण क्या है ?

उत्तर : बहाने बनाने का कारण **आलस** है |

5) समय किसका दिया हुआ अनुपम धन है ?

उत्तर : समय **ईश का** दिया हुआ अनुपम धन है |

6) कवि किस पर विश्वास करने को कहते हैं ?

उत्तर : कवि **आत्म पर** विश्वास करने को कहते हैं |

7) समय की खोंने से क्या होता है ?

उत्तर : समय की खोंने से **पीछे से पछताना पड़ेगा** |

**III.दो - तीन वाक्यों में उत्तर लिखिए**

**8) समय का सदुपयुग कैसे करना चाहिए |**

* समय बहुत अनमोल है | उसका महत्व धन से भी ज्यादा है |
* आलस छोडकर काम करना चाहिए |
* समय को सच्चा साथी बना लेना चाहिए |
* हमें काम करने का जो अवसर मिलता है, उसे व्यर्थ जाने नही देना चाहिए |

**8) समय की पहचान कविता के अंतिम चार पंक्तियों में कवि क्या कहना चाहता है ?**

समय की पहचान कविता के अंतिम चार पंक्तियों में कवि इस तरह कहना चाहता है कि -

* जो काम करते है उसे मन लगाकार करना चाहिए |
* अपनी आत्म पर विश्वास रखना चाहिए |
* हमारा संदेह को दूर भगाना चाहिए |
* हमें मिला समय को ही अच्छा मानना चाहिए |
* हमे मिला समय को व्यर्थ किये तो पीछे से पछताना पडता है |

---

### व्याकरण ( संधि )

| दीर्घ संधि | गुण संधि | वृद्धि संधि |
|---|---|---|
| समानाधिकार | परमेश्वर | एकैक |
| धर्मात्मा | महेंद्र | मतैक्य |
| विद्यार्थी | रमेश | सदैव |
| विद्यालय | गजेंद्र | महैश्वर्य |
| पर्वतावली | परोपकार | धनैश्वर्य |
| देवालय | सूर्योदय | वनौषद |
| सहानुभूति | वार्षिकोत्सव | परमौज |
| कवींद्र | जलोर्मि | महौजस्वी |
| रजनीश | सप्तर्षि | महौषधि |
| लघूत्तर | महर्षि | महौदार्य |

### ( संधि )

| यण् संधि | अयादि संधि | व्यंजन संधि | विसर्ग संधि |
|---|---|---|---|
| इत्यादि | नयन | दिग्गज | निश्चय |
| अत्यधिक | चयन | सद्वाणी | निष्कपट |
| यद्यपि | गायक | अजंत | नीरस |
| नद्यर्पण | नायिका | षड्दर्शन | दुर्गंध |
| देव्यागमन | गायिका | वाग्जाल | मनोरथ |
| अन्वय | भवन | तद्रूप | पुरोहित |
| स्वागत | पावन | जगदीश | अधोगति |
| पित्रनुमति | नाविक | षडानन | मनोबल |

ಮಾರ್ಗದರ್ಶಿ ಶಿಕ್ಷಕರು : **ಹೆಚ್.ತುಕಾರಾಮ್ ನಾಯ್ಕ**, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ




ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಕಾರ್ತಿಕ । ಸಂವತ್ಸರ: ಕ್ರೋಧಿ

**16-11-2024 – ಶನಿವಾರ**

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಕೃತ್ತಿಕಾ |
| ಯೋಗ | : ಪರಿಘ |
| ಕರಣ | : ಬಾಳವ |
| ಸೂರ್ಯೋದಯ | : 06:42:35 |
| ಸೂರ್ಯಾಸ್ತ | : 17:40:43 |
| ರಾಹು ಕಾಲ | : 10:49-12:11 |
| ಯಮಘಂಡ ಕಾಲ | : 14:56-16:19 |
| ಗುಳಿಕ ಕಾಲ | : 08:04-09:27 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 15-11-2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.19 ಅಡಿ |
| ಒಳ ಹರಿವು | 2230 ಕ್ಯುಸೆಕ್ |
| ಹೊರ ಹರಿವು | 8916 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 98.609 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1602.3 ಅಡಿ |
| ಒಳ ಹರಿವು | 3196 ಕ್ಯುಸೆಕ್ |
| ಹೊರ ಹರಿವು | 7922 ಕ್ಯುಸೆಕ್ |
| ಸಾಮರ್ಥ್ಯ | 24.642 ಟಿಎಂಸಿ |

## ಅಖಂಡ ಬಳ್ಳಾರಿ ಜಿಲ್ಲೆಗೆ ನಾಲ್ಕು "ಸಹಕಾರಿ ರತ್ನ"

**ಹಂಪಿ ಟೈಮ್ಸ್ ಹೊಸಪೇಟೆ:**
ವಿಜಯನಗರ ಒಳಗೊಂಡಂತೆ ಅಖಂಡ ಬಳ್ಳಾರಿ ಜಿಲ್ಲೆಗೆ ನಾಲ್ಕ ಸಹಕಾರ ರತ್ನ ಪ್ರಶಸ್ತಿಯನ್ನು ನೀಡಿ ಸರ್ಕಾರ ಘೋಷಣೆ ಮಾಡಿದೆ ಎಂದು ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ.

ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ಕೆ.ತಿಪ್ಪೇಸ್ವಾಮಿ, ಹಿರಿಯ ಸಹಕಾರಿ ಬಂಡೆ ರಂಗಪ್ಪ, ಬಳ್ಳಾರಿ ಜಿಲ್ಲಾ ಸಹಕಾರ ಯೂನಿಯನ್ ಉಪಾಧ್ಯಕ್ಷ ಬಿ.ಕೆ.ಕೆರೆಕೌಡಪ್ಪ ಹಾಗೂ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿರ್ದೇಶಕ ಡಿ.ಭೋಗಾರೆಡ್ಡಿ ಇವರುಗಳು ಸಹಕಾರ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಪ್ರಶಸ್ತಿ ನೀಡಿ ಗೌರವಿಸಲಿದೆ.

ಇದೆ 17ರಂದು ಬಾಗಲಕೋಟೆ ಯಲ್ಲಿ ನಡೆಯುವ ರಾಜ್ಯ ಮಟ್ಟದ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಿದೆ.

## ಇಂದು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**
ಪ್ರಸ್ತಕ ಸಾಲಿನ ಮುಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಯೋಜನೆಯಡಿ ರೈತರಿಂದ ಭತ್ತ, ರಾಗಿ, ಜೋಳ ಖರೀದಿಸುವ ಬಗ್ಗೆ ಚರ್ಚಿಸಲು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರ ಅಧ್ಯಕ್ಷತೆಯಲ್ಲಿ ನ.16 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸಭೆ ಏರ್ಪಸಲಾಗಿದೆ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.




ಆದಿವಾಸಿ ಜನರ ಏಳಿಗೆಗೆ ಹೋರಾಡಿದ ಧೀಮಂತ ವ್ಯಕ್ತಿ ಶ್ರೀ ಬಿರ್ಸಾ ಮುಂಡಾ

# ಆದಿವಾಸಿಗಳಿಗೆ ಹಲವು ಸೌಲಭ್ಯ

### ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ । ಜನಜಾತಿಯ ಗೌರವ್ ದಿವಾಸ್ ಆಚರಣೆ ಸಮಾರಂಭ

**ಹಂಪಿ ಟೈಮ್ಸ್ ಹೊಸಪೇಟೆ**
ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹಾಗೂ ಬುಡಕಟ್ಟು ಜನಾಂಗದವರ ಏಳಿಗೆಗಾಗಿ ಹೋರಾಡಿದ ಧೀಮಂತ ವ್ಯಕ್ತಿ ಭಗವಾನ್ ಬಿರ್ಸಾ ಮುಂಡಾ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ನಗರದ ಒಳಾಂಗಣ ಕ್ರೀಡಾಂಗಣದ ಸಭಾಂಗಣದಲ್ಲಿ ಶುಕ್ರವಾರ ನಡೆದ ಜನಜಾತಿಯ ಗೌರವ್ ದಿವಾಸ್ ಆಚರಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಆದಿವಾಸಿ ಹೋರಾಟಗಾರ ಬಿರ್ಸಾ ಮುಂಡಾ ಅವರ ಜನ್ಮ ದಿನಾಚರಣೆ ಅಂಗವಾಗಿ ಜನಜಾತಿಯ ಗೌರವ್ ದಿವಸ್ ಎಂದು ಪ್ರತಿ ವರ್ಷ ನವಂಬರ್ 15 ರಂದು ಆಚರಿಸಲಾಗುತ್ತದೆ. ಜನಜಾತಿಯ ಗೌರವ್ ದಿವಸದಂದು ದೇಶದ ಜನಜಾತಿಯ ಜನರ ಸಾಧನೆಗಳು, ಸಂಸ್ಕೃತಿಗಳು, ಐತಿಹ್ಯಗಳು ಮತ್ತು ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಅವರು ನೀಡಿದ ಕೊಡುಗೆಗಳನ್ನು ಸ್ಮರಿಸಲಾಗುತ್ತದೆ ಎಂದರು.



ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ಅಡಿಯಲ್ಲಿ ಕೇಂದ್ರ ಸರ್ಕಾರವು ಆದಿವಾಸಿಗಳ ಸಬಲೀಕರಣಕ್ಕಾಗಿ ಪ್ರಧಾನ ಮಂತ್ರಿ ಆದಿ ಆದರ್ಶ ಗ್ರಾಮ ಯೋಜನೆ ಹಾಗೂ ಧರ್ತಿ ಆಬಾ ಜನಜಾತಿಯ ಉತ್ಕರ್ಷ ಅಭಿಯಾನ ಕಾರ್ಯಕ್ರಮಗಳ ಅಡಿಯಲ್ಲಿ ಆದಿವಾಸಿಗಳಿಗೆ ಜಲಜೀವನ್ ಮಿಷನ್, ಆಯುಷ್ಮಾನ್ ಕಾರ್ಡ್ ಮತ್ತು ಪ್ರಧಾನ ಮಂತ್ರಿ ಆರೋಗ್ಯ ಯೋಜನೆ ಸೇರಿದಂತೆ ಹಲವು ಯೋಜನೆಗಳ ಸೌಲಭ್ಯ ಒದಗಿಸಲಾಗುವುದು ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೋಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಂ ಷಾ, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಶರಣಪ್ಪ ಮುದಗಲ್, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕರಾದ ನಿಯಾಜ್ ಹಾಗೂ ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕರಾದ ಚಿದಾನಂದ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶಾಷು ಮೋದಿನ್ ಅವರುಉಪಸ್ಥಿತರಿದ್ದರು..ಸಾಂಸ್ಕೃತಿಕಕಾರ್ಯಕ್ರಮವನ್ನು ಶಾರದ ಮತ್ತು ತಂಡದವರು ನೆರವೇರಿಸಿದರು. ಯಮುನಾ ಕುಲಕರ್ಣಿ ನಿರೂಪಿಸಿದರು.

# ಪಿಡಿಓ ಪರೀಕ್ಷಾರ್ಥಿಗಳು ಪರೀಕ್ಷಾ ನಿಯಮ ಪಾಲಿಸಿ

### ಪರೀಕ್ಷೆ ಪಾರದರ್ಶಕ ನಿರ್ವಹಣೆಗೆ ಜಿಲ್ಲಾಡಳಿತ ಸನ್ನದ್ಧ : ಡಿಸಿ ಎಂ.ಎಸ್.ದಿವಾಕರ್



**ಹಂಪಿ ಟೈಮ್ಸ್ ಹೊಸಪೇಟೆ**
ಪಿಡಿಓ ನೇಮಕಾತಿ ಪರೀಕ್ಷೆಯಲ್ಲಿ ನ.16 ಕನ್ನಡ ಭಾಷಾ ಪರೀಕ್ಷೆ ಮತ್ತು 17 ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವ ಪರೀಕ್ಷಾರ್ಥಿಗಳು ನೀಡಿರುವ ಸೂಚನೆಯನ್ನು ಕಡ್ಡಾಯವಾಗಿ ಪಾಲಿಸಬೇಕು, ತಪ್ಪಿದರೇ ನಿರ್ದಾಕ್ಷಿಣ್ಯ ಕ್ರಮ ಜರುಗಲಿಸಲಾಗುವುದು ಎಂದು ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಂಭಾಗಣದಲ್ಲಿ ನಡೆದ ಪಿಡಿಓ ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷಾ ಪೂರ್ವಸಿದ್ದತಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಶುಕ್ರವಾರ ಅವರು ಮಾತನಾಡಿದರು. ನ.16 ರಂದು ಕನ್ನಡ ಪರೀಕ್ಷೆ ಮಧ್ಯಾಹ್ನ 2 ಗಂಟೆಯಿಂದ 4 ಗಂಟೆವರೆಗೆ ನಡೆಯಲಿದ್ದು, ಹೊಸಪೇಟೆಯಲ್ಲಿ 22, ಹ.ಬೊ.ಹಳ್ಳಿ 2 ಕೇಂದ್ರಗಳು ಸೇರಿದಂತೆ ಒಟ್ಟು 24 ಕೇಂದ್ರಗಳನ್ನು ನಿಯೋಜಿಸಲಾಗಿದೆ. ಒಟ್ಟು 8214 ಅಭ್ಯರ್ಥಿಗಳು ಪರೀಕ್ಷೆಯನ್ನು ಎದುರಿಸಲಿದ್ದಾರೆ. ನ.17 ರಂದು ನಡೆಯುವ ಸ್ಪರ್ಧಾತ್ಮಕ ಪರೀಕ್ಷೆ ಎರಡು ಪತ್ರಿಕೆಗಳಿದ್ದು, ಬೆ.10 ರಿಂದ 11:30 ರವರೆಗೆ ಹಾಗೂ ಮಧ್ಯಾಹ್ನ 2 ರಿಂದ 4 ಗಂಟೆಯವರೆಗೆ ಪರೀಕ್ಷೆ ನಡೆಯಲಿದೆ. ಹೊಸಪೇಟೆಯಲ್ಲಿ 24 ಕೇಂದ್ರ, ಹ.ಬೊಹಳ್ಳಿಯಲ್ಲಿ 06 ಕೇಂದ್ರ ಮತ್ತು ಕೂಡ್ಲಿಗಿಯಲ್ಲಿ 3 ಕೇಂದ್ರಗಳು ಸೇರಿದಂತೆ ಒಟ್ಟು 33 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ. ಒಟ್ಟು 12036 ಅಭ್ಯರ್ಥಿಗಳು ಪರೀಕ್ಷೆಯನ್ನು ಎದುರಿಸಲಿದ್ದಾರೆ. ಪ್ರತಿ ನಾಲ್ಕು ಕೇಂದ್ರಕ್ಕೆ ಒಬ್ಬರಂತೆ ಒಟ್ಟು 9 ಜನ ಅಧಿಕಾರಿಗಳನ್ನು ನೇಮಿಸಲಾಗಿದೆ. ಪ್ರತಿ ಪರೀಕ್ಷಾ ಕೇಂದ್ರಕ್ಕೆ ಒಬ್ಬರಂತೆ ಒಟ್ಟು 33 ಜನ ಅಧಿಕಾರಿಗಳು ಸ್ಥಳ ನೀರಿಕ್ಷಣಾಧಿಕಾರಿಗಳನ್ನು ನಿಯೋಜಿಸಲಾಗಿದೆ. ಪ್ರತಿ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಪರೀಕ್ಷೆಯಲ್ಲಿ ಯಾವುದೇ ರೀತಿಯ ಅಕ್ರಮಗಳಿಗೆ ಅವಕಾಶವಿಲ್ಲ. ಪರೀಕ್ಷಾರ್ಥಿಗಳು ಗಂಭೀರವಾಗಿ ಪರೀಕ್ಷೆಗಳನ್ನು ಎದುರಿಸಬೇಕು. ಅಕ್ರಮ ಕಂಡರೆ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಮಾತನಾಡಿ, ಪರೀಕ್ಷಾ ವೀಕ್ಷಕ ಅಧಿಕಾರಿಗಳು ಪರೀಕ್ಷಾ ಕೇಂದ್ರದ ಸಂಪೂರ್ಣ ಜವಾಬ್ದಾರಿ ವಹಿಸಬೇಕು. ವೇಳಾಪಟ್ಟಿಯನ್ನು ಪರೀಕ್ಷೆಗಳು ಸುಗಮವಾಗಿ ನಡೆಯಲು ನಿಗಧಿತ ವೇಳೆಗಿಂತ ಹತ್ತು ನಿಮಿಷ ಮುಂಚಿತವಾಗಿ ಹಾಜರಿರಬೇಕೆಂದು ತಿಳಿಸಿದರು. ಯಾವುದೇ ರೀತಿಯ ಅಹಿತಕರ ಘಟನೆಗಳು ಜರುಗದಂತೆ ಪೊಲೀಸ್ ಇಲಾಖೆ ಕ್ರಮ ವಹಿಸಬೇಕೆಂದು ತಿಳಿಸಿದರು.

ಈ ವೇಳೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಲೀಂ ಪಾಷಾ, ಎಸಿ ಪಿ.ವಿವೇಕಾನಂದ, ಡಿಡಿಪಿಐ ವೆಂಕಟೇಶ್ ರಾಮಚಂದ್ರಪ್ಪ, ನೋಡಲ್ ಅಧಿಕಾರಿ ಹುಲಿಬಂಡಿ ಇತರರಿದ್ದರು.

ಗ್ರಾಪಂ ಅಧ್ಯಕ್ಷ ಬಸಪ್ಪ ಮೆಚ್ಚುಗೆ । ಶಾಲಾಪೂರ್ವ ಶಿಕ್ಷಣ ಬಲವರ್ಧನೆಗೆ ಕಾರ್ಯಕ್ರಮಗಳು ಮತ್ತಷ್ಟು ಹೆಚ್ಚಲಿ

# ಜನರ ಗಮನ ಸೆಳೆದ ಅಂಗನವಾಡಿ ಶಿಕ್ಷಣ

**ಹಂಪಿ ಟೈಮ್ಸ್ ಕೊಟ್ಟೂರು**
ಇತ್ತೀಚೆಗೆ ಕ್ರಿಯಾಶೀಲ ಶಿಕ್ಷಣದಿಂದ ಅಂಗನವಾಡಿ ಶಿಕ್ಷಣವು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಖಾಸಗಿ ಶಾಲೆಗಳ ಶಿಕ್ಷಣವನ್ನು ಮೀರಿಸಿ ಅಭಿವೃದ್ಧಿ ಹೊಂದಿದೆ. ಮಕ್ಕಳಿಗೆ ನಿತ್ಯ ಚಟುವಟಿಕೆ ಆಧಾರಿತ ಶಿಕ್ಷಣ ನೀಡುವಲ್ಲಿ ಶಿಕ್ಷಕಿಯರ ಕಾರ್ಯ ಶ್ಲಾಘನೀಯ ಎಂದು ಗ್ರಾಪಂ ಅಧ್ಯಕ್ಷ ಬಸಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲ್ಲೂಕಿನ ಬೋರನಹಳ್ಳಿ ಸ.ಹಿ ಪ್ರಾ. ಶಾಲೆಯಲ್ಲಿ ರಾಮಪುರ ಗ್ರಾಪಂ ಸಹಯೋಗದಲ್ಲಿ, ಕ.ಕ ಪ್ರದೇಶಾಭಿವೃದ್ಧಿ ಮಂಡಳಿ ಕಲಬುರಗಿ, ಜಿಲ್ಲಾಡಳಿತ, ಜಿಪಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಕಲಿಕೆ-ಟಾಟಾ ಟ್ರಸ್ಟ್ ಬೆಂಗಳೂರು ಇವರ ಸಹಯೋಗದೊಂದಿಗೆ ಶಾಲಾಪೂರ್ವ ಶಿಕ್ಷಣ ಬಲವರ್ಧನೆ ಕಾರ್ಯಕ್ರಮದಡಿ ಏರ್ಪಡಿಸಿದ್ದ ಬಾಲಮೇಳ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಖಾಸಗಿ ಸಂಸ್ಥೆಗಳು ಪಾಲಕರ ಮನ ಸೆಳೆಯಲು ಇಲ್ಲಿನ ಬಾಲಮೇಳದಂತ ಕಾರ್ಯಕ್ರಮಗಳನ್ನು ದೊಡ್ಡ ಮಟ್ಟ ದಲ್ಲಿ ಮಾಡಿ ಅದರ ಆರ್ಥಿಕ ಹೊರೆಯನ್ನು ಪೋಷಕರ ಮೇಲೆ ಹಾಕುವಂತೆ ಆ ರೀತಿ ಇಲ್ಲಿಲ್ಲ. ಮಕ್ಕಳ ಕಲಿಕೆಗೆ ಪೂರಕವಾದ ಶಿಕ್ಷಣ ಕಾರ್ಯಕ್ರಮಗಳು ಇಲ್ಲಿ ಜರುಗುತ್ತಿವೆ. ಇದಕ್ಕೆ ಕಲಿಕೆ-ಟಾಟಾ ಟ್ರಸ್ಟ್ ಸಹಕಾರ ನೀಡುತ್ತಿರುವುದು ಪ್ರಶಂಸನೀಯ ಎಂದರು.

ಅಂಗನವಾಡಿ ಮಕ್ಕಳ ಶಿಕ್ಷಣವನ್ನು ಮತ್ತಷ್ಟು ಅಭಿವೃದ್ಧಿ ಪಡಿಸಲು ಗ್ರಾಮ ಪಂಚಾಯತಿ ಸದಾ ಸಹಕಾರಕ್ಕೆ ಸಿದ್ದವಿದೆ, ಕಾರ್ಯಕ್ರಮಗಳು ಹೆಚ್ಚೆಚ್ಚು ನಡೆದರೆ ಮತ್ತಷ್ಟು ಮಕ್ಕಳು, ಪೋಷಕರು ಅಂಗನವಾಡಿ ಶಿಕ್ಷಣದತ್ತ ಮುಖ ಮಾಡುತ್ತಾರೆ ಎಂದು ಅಭಿಪ್ರಾಯಪಟ್ಟರು.



ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಜ್ಜನಿ ವಲಯದ ಮೇಲ್ವಿಚಾರಕಿ ಅನ್ನಪೂರ್ಣ ಮಕ್ಕಳ ಕಲಿಕೆಯನ್ನು ಪ್ರೋತ್ಸಹಿಸಲು ಬಾಲಮೇಳ ಕಾರ್ಯಕ್ರಮಗಳು ತುಂಬಾ ಅವಶ್ಯ ಈ ಹಿನ್ನೆಲೆ

ಪ್ರತೀ ತಿಂಗಳು 3ನೇ ಶುಕ್ರವಾರ ಅಥವಾ ಶನಿವಾರದಂದು "ಅಂಗನವಾಡಿಯತ್ತ ಸಮುದಾಯ" ಪಾಲಕ-ಪೋಷಕರ ಸಭೆಗಳನ್ನು ಮಾಡಿ ಮಕ್ಕಳಿಗೆ ಕಲಿಸಲಾಗುವ ಶಿಕ್ಷಣ ಮತ್ತು ಸಾಮಾಗ್ರಿ ಬಗ್ಗೆ ತಿಳಿಸಲಾಗುತ್ತೆ ಎಂದರು.

ಶಾಲಾಪೂರ್ವ ಶಿಕ್ಷಣ ಬಲವರ್ಧನೆ ಕಾರ್ಯಕ್ರಮದ ಜಿಲ್ಲಾ ವ್ಯವಸ್ಥಾಪಕರು ಕೊಟ್ರೇಶ ಯರಡಕೇರಿ ಮಾತನಾಡಿ, ನಾವು ಮಕ್ಕಳಿಗೆ ಶಿಕ್ಷಣದಲ್ಲಿ ಆಸಕ್ತಿಯನ್ನು ಹೆಚ್ಚಿಸಲು ಹಾಗೂ ಅಂಗನವಾಡಿ ಶಿಕ್ಷಕಿಯರಿಗೆ ಹಾಗೂ ಸಹಾಯಕಿಯರಿಗೆ ಶಾಲಾಪೂರ್ವ ಶಿಕ್ಷಣದ ಸಾಮರ್ಥ್ಯವನ್ನು ಹೆಚ್ಚಿಸು ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ತಾಲೂಕಿನ ಉಜ್ಜಿನಿ ವಲಯದ ಎಲ್ಲಾ ಅಂಗನವಾಡಿ ಶಿಕ್ಷಕಿಯರು ಹಾಗೂ ಗ್ರಾಪಂ ಸದಸ್ಯರು ಪೋಷಕರು ಮಕ್ಕಳು ಹಾಜರಿದ್ದರು. ಅಂಗನವಾಡಿ ಕಾರ್ಯಕರ್ತೆ ನಿಂಗಮ್ಮ ನಿರ್ವಹಿಸಿದರು.

## ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳ ನೇಮಕಾತಿ ಪರೀಕ್ಷೆ : ನಿಷೇದಾಜ್ಞೆ ಜಾರಿ

**ಹಂಪಿ ಟೈಮ್ಸ್ ಹೊಸಪೇಟೆ**
ನ. 16 ಮತ್ತು 17 ರಂದು ನಡೆಯುವ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳ ನೇಮಕಾತಿ ಪರೀಕ್ಷಾ ಕೇಂದ್ರಗಳ ಸುತ್ತ ಮುತ್ತ 200 ಮೀಟರ್ ವ್ಯಾಪ್ತಿಯೊಳಗೆ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾ ದಂಡಾಧಿಕಾರಿ ಎಂ.ಎಸ್.ದಿವಾಕರ ಆದೇಶ ಹೊರಡಿಸಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿನ ಹೈದ್ರಾಬಾದ್ ಕರ್ನಾಟಕ ವೃಂದದ 97 ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳ ನೇಮಕಾತಿಗೆ ಕನ್ನಡ ಭಾಷಾ ಪರೀಕ್ಷೆ ಮತ್ತು ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರಗಳ 200 ಮೀಟರ್ ಸುತ್ತ ಮುತ್ತ ನಿರ್ಬಂಧಿತ ಪ್ರದೇಶವೆಂದು ಘೋಷಿಸಲಾಗಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ ಜೆರಾಕ್ಸ್ ಮತ್ತು ಕಂಪ್ಯೂಟರ್ ಅಂಗಡಿಗಳನ್ನು ಮುಚ್ಚಿಸಲು ಆದೇಶಿಸಿ, ಎಲ್ಲಾ ಪರೀಕ್ಷಾ ಕೇಂದ್ರಗಳ ಪ್ರದೇಶದಲ್ಲಿ ಪರೀಕ್ಷಾರ್ಥಿಗಳಲ್ಲದ, ಪರೀಕ್ಷಾ ಉಸ್ತುವಾರಿ ಇಲ್ಲದ ಅಧಿಕಾರಿಗಳು, ಸಿಬ್ಬಂದಿ, ಸಾರ್ವಜನಿಕರು ಅಥವಾ ಯಾವುದೇ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶವನ್ನು ಕಡ್ಡಾಯವಾಗಿ ನಿಷೇಧಿಸಿದೆ.

## ಕೆ.ಕೆ.ಆರ್.ಡಿ.ಬಿ ಕಾಮಗಾರಿ ಕಾಲಮಿತಿಯಲ್ಲಿ ಮುಗಿಸಿ, ತಡವಾದರೆ ಶಿಸ್ತು ಕ್ರಮ : ಸಚಿವ ಶಿವರಾಜ ತಂಗಡಗಿ

### ಕೊಪ್ಪಳ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆ



**ಹಂಪಿ ಟೈಮ್ಸ್ ಕೊಪ್ಪಳ**
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಕೊಪ್ಪಳ ಜಿಲ್ಲೆಯಲ್ಲಿ ನಡೆಯುತ್ತಿರುವ ಕೆಲಸ ಮತ್ತು ಕಾಮಗಾರಿಗಳನ್ನು ಕಾಲಮಿತಿಯಲ್ಲಿ ಮುಗಿಸಿ ಇಲ್ಲದಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ಶುಕ್ರವಾರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಕೊಪ್ಪಳ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕೆ.ಕೆ.ಆರ್.ಡಿ.ಬಿ ಅನುದಾನಡಿ ಕೊಪ್ಪಳ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾದ 2018-19, 2019-20 ಮತ್ತು 2020-21ನೇ ಸಾಲಿನ ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. ಇದರ ಜೊತೆಗೆ 2023-24ನೇ ಸಾಲಿನ ಮುಕ್ತಾಯ ಹಂತದಲ್ಲಿರುವ ಕಾಮಗಾರಿಗಳನ್ನು ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಲು ಅನುಷ್ಠಾನಾಧಿಕಾರಿಗಳು ತ್ವರಿತ ಕ್ರಮ ಕೈಗೊಳ್ಳಬೇಕು ಎಂದರು.

ಇನ್ನೂ ಪ್ರಾರಂಭಿಸದೆ ಇರುವ ಕಾಮಗಾರಿಗಳ ಕುರಿತು ಯಾವುದೇ ಸಮಸ್ಯೆಗಳಿದ್ದರೆ, ಕೂಡಲೇ ಅದನ್ನು ಸರಿಪಡಿಸಿ ಆ ಎಲ್ಲಾ ಕಾಮಗಾರಿಗಳು ಸಹ ಈ ಡಿಸೆಂಬರ್ ಮಾಹೆಯೊಳಗೆ ಪ್ರಾರಂಭಿಸಲು ತುರ್ತಾಗಿ ಕ್ರಮ ಕೈಗೊಳ್ಳಬೇಕು. ಈ ಹಿನ್ನೆಲೆಯಲ್ಲಿ ಯಾವುದೇ ಕಾಮಗಾರಿಗಳು ಅಪೂರ್ಣ ಅಥವಾ ಪ್ರಾರಂಭವಾಗದೇ ಬಾಕಿ ಉಳಿದರೆ ಸಂಬಂಧಪಟ್ಟ ಅಧಿಕಾರಿಗಳನ್ನೆ ಜವಾಬ್ದಾರರನ್ನಾಗಿ ಮಾಡಲಾಗುವುದು ಎಂದು ಸಚಿವರು ಸೂಚನೆ ನೀಡಿದರು.

ಕೊಪ್ಪಳ ಜಿಲ್ಲಾ ಕೇಂದ್ರದಲ್ಲಿ ನಿರ್ಮಾಣವಾಗುತ್ತಿರುವ ರಂಗಮಂದಿರ ಮತ್ತು ಜಿಲ್ಲೆಯ ವಿವಿಧೆಡೆ ನಿರ್ಮಾಣವಾಗುತ್ತಿರುವ ಶಾಲಾ ಕೊಠಡಿಗಳು, ಆರೋಗ್ಯ ಕೇಂದ್ರಗಳು ಹಾಗೂ ಇತರೆ ಕಟ್ಟಡಗಳ ಲೋಕಾರ್ಪಣೆಗಳಿದ್ದರೆ ಸಂಬಂಧಪಟ್ಟ ಅಧಿಕಾರಿಗಳು ನಮ್ಮ ಗಮನಕ್ಕೆ ತನ್ನಿ. ಕಾರಟಗಿ, ಕನಕಗಿರಿ ಹಾಗೂ ಕುಕನೂರು ತಾಲ್ಲೂಕುಗಳಲ್ಲಿ ಮಿನಿ ವಿಧಾನಸೌಧ ನಿರ್ಮಾಣಕ್ಕಾಗಿ ಮೂರು ತಾಲ್ಲೂಕುಗಳಲ್ಲಿ ಜಮೀನು ಗುರುತಿಸಲು ಆಯಾ ತಹಶೀಲ್ದಾರರು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್ ಅರಸಿದ್ದಿ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಉಪವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಷ್ಮಾ ಹಾನಗಲ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಟಿ.ಲಿಂಗರಾಜು ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಮತ್ತಿತರರಿದ್ದರು.